ಶ್ರೀ ಸರಸ್ವತೀ ಪ್ರಸನ್ನ

ದೈವಲೀಲಾ

[ಒಂದು ಚಿಕ್ಕ ಕಥೆ.]

ಲೇಖಕ;— ಶ್ರೀನಿವಾಸ

ದೇವ ಗ್ರಾಮವೆಂಬದೊಂದು ಸಣ್ಣ ಊರು. ಅದೇನೋ ಅಷ್ಟು ದೊಡ್ಡದಲ್ಲ. ಅಲ್ಲಿ ಆನಂದರಾಯರೆಂಬೊಬ್ಬ ಗೃಹಸ್ಥರು ಅವರು ಜಮೀನದಾರರು; ಸುಖವಸ್ತುಗಳು. ಅವರಿಗೆ ದಿನಕರ, ದಿವಾಕರ, ಮಧುಕರರೆಂಬ ಮೂರು ಮಂದಿ ಗಂಡು ಮಕ್ಕಳು. ಸುಶಿಲೆಯೆಂಬೊಬ್ಬ ಹೆಣ್ಣು ಮಗಳು. ಇವರಿಗೀಗ ವಯಸ್ಸು ಐವತ್ತಕ್ಕೆ ಮಿಕ್ಕಿದೆ. ದಿನಕರನು ಬಿ. ಎ. ದ ಅಭ್ಯಾಸ ನಡಿಸಿದ್ದನು. ಲಗ್ನವಾಗಿದ್ದಿತು. ದಿವಾಕರನು, ದಿವಾಕರನಂತೆ ಸಂಚಾರಮಾಡುತ್ತ. [ಪೂರ್ವದಿಂದ ಪಶ್ಚಿಮ ಮನೆಯಿಂದ ಹೊರಗೆ ಹೊರಗಿನಿಂದ ಮನೆ] ಲಿದ್ದನು. ಇವನ ಕೆಲಸವೆಂದರೆ, ಊಟ, ಅಡ್ಡಾಡುವಿಕೆ ಇವೇ ಮುಖ್ಯ ಕೆಲಸಗಳು. ಮಧುಕರನೆಂಬವನು ಮ್ಯಾಟ್ರಿಕಲೇಶನ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ್ದನು. ಇವನಾದರೂ ಕಾಲೇಜದಲ್ಲಿದ್ದನು. ಆನಂದರಾಯರು ಮಗಳ ಲಗ್ನದ ಚಿಂತಿಯಿಂದ ಬಹಳ ಪೀಡಿತರಾಗಿದ್ದರು. ಸುಶೀಲೆಯೆನೊ ಹದಿನಾಲ್ಕು ವರ್ಷದ

ವಳಾಗಿದ್ದಳು. ಲಗ್ನದ ಕಾಳಜಿಯಿಂದ ಆನಂದರಾಯ, ವರದಾಬಾಯಿಯವರು ಬಹಳ ಕ್ಷೀಣರಾಗಿದ್ದರು. ಶ್ರೀಮಂತ, ವಿದ್ಯಾ ಸಂಪನ್ನನಾದವನೊಬ್ಬನನ್ನು ಹುಡುಕುತ್ತಲಿದ್ದರು.

ಸುಶೀಲೆಯು ಬಲು ಚನ್ನೆ, ಅವಳ ಮುಖ ಕಮಲವು ಪೂರ್ಣ ಚಂದ್ರಮನನ್ನು ಹೋಲುತ್ತಿತ್ತು. ಆ ದುಂಡ ಮುಖದ ಮೇಲೆ ಬಿದರಿದ ಎರಳೆಯ ಕಣ್ಣುಗಳಂಥ ಎರಡು ವಿಶಾಲವಾದ ಕಂಣುಗಳು, ನಿಡಿದಾದ ಮೂಗ, ಥಳಥಳಿಸುವ ಕದಪುಗಳು, ತೊಂಡೆ ಹಣ್ಣಿನಂಥ ಕೆಂದುಟಿಯು ಅವಳ ಮುಖದ ಸೌಂದರ್ಯವನ್ನು ಹೆಚ್ಚಿಸುತಲಿತ್ತು. ಇಂಥ ರೂಪವತಿಯಾದ ಮಗಳಿಗೆ ಎಂಥವನು ಕೈ ಹಿಡಿಯುವನೋ, ಎನೋ, ಎಂಬ ವಿಚಾರದಲ್ಲಿ ತಂದೆತಾಯಿಗಳು ಮಗ್ನರಾಗಿದ್ದರು. ಇದಲ್ಲದೆ, ಇವರಿಗೆ ದಿನಕರ ಮಧುಕರರ ವಿಚಾರವು ಒಂದು ಕಡೆ, ಮತ್ತೊಂದು ಕಡೆ, ಉಡಾಳನಾದ ದಿವಾಕರನ ವಿಚಾರ ಹೀಗಾಗಿ ಬಹಳ ಉತ್ಸಾಹಗುಂದಿದ್ದರು ಬಹಳ ವರದಕ್ಷಣೆ ಕೊಡುವಂತಿದ್ದಿಲ್ಲ. ಬಹಳ ವರದಕ್ಷಣೆ ಕೊಡದಿದ್ಧರೆ ವಿದ್ಯವಂತೆಯಾದ ಮಗಳಿಗೆ ಉತ್ತಮನಾದ ವರನು ಸಿಗಲಾರನು. ಉತ್ತಮವಾದ ವರನಿಗೆ ಕೊಡಲಿಕ್ಕೆ ಆನಂದರಾಯರ ಹತ್ತಿರ ದುಡ್ಡಿರಲಾರದು.

ಏನೋ ! ಆಕೆಯ ದೈವವೆಂದು ದೇವರ ಮೇಲೆ ಭಾರ ಹಾಕಿದ್ದರು. “ ದಿನಕರನು ಏನಾದರೂ ಸಹಾಯ ಮಾಡುವನೋ ಇಲ್ಲೋ ? ದುಡ್ಡಿನ ಕೆಲಸ ಅವನಾದರೂ ಏನು

ಮಾಡಿಯಾನು ? ಅವನಿಗೂ ಹೆಂಡತಿ ಮಕ್ಕಳು ಮುಂಬಯಿ ಯಂಥ ಪಟ್ಟಣದಲ್ಲಿ ಸ್ವಲ್ಪ ದುಡ್ಡು ಹೇಗೆ ಸಾಲಬೇಕು ? ವಾಕರನಂತೂ ಇಪ್ಪತ್ತು ವರ್ಷದವನಾದರೂ, ವಿದ್ಯಾಹೀ ನನಾಗಿ ಕೆಲಸಬೊಗಸೆಯಿಲ್ಲದೆ ಅಡ್ಡಾಡುತ್ತಾನೆ. ಮಧುಕರನಿ ಇನ್ನೂ ದುಡ್ಡುಗಳಿಸುವ ತ್ರಾಣವಿಲ್ಲ. ಏನು ಮಾಡಲಿ? ಲಗ್ನ ಹೇಗಾಗಬೇಕು ? ಹುಡುಗೆಯಂತೂ ಉಪವರಳಾಗಿದ್ದಾಳೆ, ಯಿತು, ಆಕೆಯ ದೈವದಲ್ಲಿದ್ದದ್ದಾಗಲಿ."

ದಿನಕರನು ಮುಂಬಯಿಯಲ್ಲಿ ದೊಡ್ಡ ಆಫೀಸಿನಲ್ಲಿ ಕೆಲಸಮಾಡುತ್ತಿದ್ದನು. ಅಲ್ಲಿ ನೂರು ರೂಪಾಯಿಗಳು ಹೇಗೆ ಸಾಲಬೇಕು? ವಿಮಲೆ ಮತ್ತು ಎರಡು ಮಕ್ಕಳು ತಮ್ಮ ನಾದ ಮಧುಕರ ಹೀಗೆ ಐದು ಮಂದಿಯನ್ನು ಸಂರಕ್ಷಿಸಬೇ ಕಾಗಿತ್ತು. ದೇವಗ್ರಾಮದಲ್ಲಿ ಆನಂದರಾಯರು. ವರದಾ ಬಾಯಿ, ಸುಶೀಲೆ ಮತ್ತು ದಿವಾಕರ ಇವರೆಲ್ಲರೂ ಕೂಡಿ ಇರುತ್ತಿದ್ದರು. ಜಮೀನದಾರರಾದರು ಮಕ್ಕಳಿಗೆ ಕಲಿಸಿ ದಿನಕರನ ಲಗ್ನ ಮಾಡಿ ದುಡ್ಡಿಲ್ಲದವರಾಗಿದ್ದರು ದಿನಕರನಾ ದರೂ ಬಹಳ ಸುಶೀಲ, ವಿದ್ಯಾವಂತ, ಪರೋಪಕಾರಿ, ಇವನಿಗೆ ಸುಮಾರು ಮೂವತ್ತು ವರ್ಷಗಳಾಗಿರಬಹುದು. ಏನೇ ಆಗಲಿ, ಅವನು ತನ್ನ ಸಂಸಾರ ಸಾಗಿಸಿಕೊಂಡ ಸುಖದಿಂದಲಿರುತ್ತಿ ದ್ದನು. ಆದರೂ ಅವನಿಗೆ ತನ್ನ ತಂಗಿಯ ಲಗ್ನದ ಚಿಂತೆ. ತಂದೆತಾಯಿಗಳನ್ನು ಬಿಟ್ಟುಬಂದ ಚಿಂತೆ, ಇದಲ್ಲದೆ ತಮ್ಮನ ಚಿಂತೆಯು ಬಾಧಿಸುತ್ತಿದ್ದವು. ಇಲ್ಲಿಯೇ ಅವರನ್ನು ಕರಿಸಿದರೆ ಸಂಸಾರವು ಸಾಗುವಂತಿಲ್ಲ. ಹೇಗೆ ಮಾಡಬೇಕೆಂಬ ವಿಚಾರ

ದಲ್ಲಿದ್ದನು. ದಿವಾಕರನು ಮಾತ್ರ ಈ ಯಾವ ಚಿಂತೆಯಿಲ್ಲ
ತನ್ನ ತಿಂಡಿ ಚೈನಿಗಳಾದರೆ ಸಾಕೆನ್ನುತ್ತಿದ್ದ. ಮನೆಯ
ಬರಬರುತ್ತ ಮುಂಜಾನೆಯ ಚಹಾಪಾನವು ನಿಂತಿತು. ನ
ದಿವಾಕರನಿಗೆ ಬಿಗಿಬಂತು. ಆಯಿತು! ಕಳ್ಳನೆಂಬ ರಾಕ್ಷಸ
ಇವನಲ್ಲಿ ಪ್ರವೇಶ ಮಾಡಿದನು. ಅದರ ಸವಿಯೂ ಹತ್ತಿ
ಅಲ್ಲಿ ಇಲ್ಲಿ ಇವನ ಕಳವು ನಡೆಯ ಹತ್ತಿತು. ಮನೆಯಲ್ಲಿಯ
ಸಹ ಸುರುವಾಯಿತು. ತಂಗಿಯ ಸಂದುಕಕ್ಕೆ ಬಹುತರವಾ
ಇವರ ದರೋಡೆ ಅವಳು ಸುಮ್ಮನೆ ಇರುತ್ತಿದ್ದಳು. ತಂ
ಗೊತ್ತಾದರೆ ಹೊಡೆಯುವನೆಂದು ತಿಳಿದು, ಅವನಿಗೆ ಸು
ಯು ಇದರ ವಿಷಯವಾಗಿ ಏನೂ ಹೇಳಲಿಲ್ಲ. ಒಂದೆರ
ಸಾರೆ ಬೇಡವೆಂದು ದಿವಾಕರನಿಗೆ ಹೇಳಿದಳು. ಆದರೆ ದುಡ್ಡಿ
ಎಯು ದುಃಖಕ್ಕೀಡಾಗುತ್ತಿದ್ದಳು. ಅವಳನ್ನೇ ಹೊಡೆ
ಹತ್ತಿದನು. "ನನಗಿಂತಲೂ ಚಿಕ್ಕವಳಾಗಿ ಉಪದೇಶಮಾ
ವಿಯಾ?" ಇವೇ ಮುಂತಾದ ಪ್ರಶ್ನೆ ಮಾಡುತ್ತಿದ್ದನು ಅ
ಳ ಉಪದೇಶಕ್ಕೆ ತಾಡನವೇ ಉತ್ತರ. ಹೀಗಾಗಿ ಅವ
ಬೇಸತ್ತು ಹೇಳುವದನ್ನೇ ಬಿಟ್ಟಳು. ಆನಂದರಾಯ
ಸರ್ವಸಾಧಾರಣ ಇವನ ಸುದ್ದಿ ತಲುಪಿತು. ಮುದಕರಾ
ತ್ತ ಬಂದಂಥ ಆನಂದರಾಯರಿಗೆ ಬಹಳ ವ್ಯಸನವಾಯಿತು
ಅವರು ಮಗನಿಗೆ ಬುದ್ಧಿ ಹೇಳಬೇಕೆಂದರೆ ಹದಿನಾರು ವ
ಗಳು ಮಿಕ್ಕಿಹೋಗಿದ್ದವು. ಇದಲ್ಲದೆ ಅವನು ಹೇಳಿ ಕೆ
ದುರ್ನಡತೆಯವ ಕೇಳುವನುಹೇಗೆ! ಏನೇ ಆಗಲಿ ಒ
ರಡು ಸಾರೆ ಹೇಳಿ ನೋಡಿದರು. ವ್ಯರ್ಥ. ಆನಂದರಾಯ
ಸಿಟ್ಟಿನಭರದಲ್ಲಿ ಬಯ್ಯುತ್ತಿದ್ದರು. ಇದು ವರದಾಬಾಯಿ

ರಿಗೆ ಸೇರಿಕೆ ಇರಲಿಲ್ಲ. ಯಾಕಂದರೆ ಮಗನು ಏನೇ ಮಾಡ
, ತಾಯಿಯ ಕರಳು, ಹೇಗೆತಾನೇ ಸಹಿಸ್ಯಾಳು? ಇವ
ತ್ರಾಸವನ್ನು ತಾಳಲಾರದೆ ಸುಶೀಲೆಯು ಮುಂಬಯಿ
ಹೊರಟಳು.

ರವಿವಾರ ಪ್ರಾತಃಕಾಲ ಸುಳಿಗಾಳಿಯು ಬೀಸಹತ್ತಿದೆ. ಉದ್ಯೋಗದವರು ತಮ್ಮ ತಮ್ಮ ಉದ್ಯೋಗದಲ್ಲಿ ತೊಡಗ ತ್ತಿದ್ದಾರೆ. ಕಾಮದಾರರು ಕಚೇರಿಗೆ ಸೂಟಿ ಇದ್ದ ಕಾರಣ ಮನೆಯಲ್ಲಿಯೇ ಇದ್ದಾರೆ. ಅದರಂತೆಯೇ ನಮ್ಮ ದಿನಕರನು ಮನೆಯಲ್ಲಿ ಏನೋ ಓದುತ್ತ ಕೂತಿದ್ದಾನೆ. ಮಕ್ಕಳು ಮನೆ ರುಮುಂದೆ ಕೂತು ಆಡಹತ್ತಿವೆ. ವಿಮಲೆಯು ಮನೆಯ ಕೆಲ ದಲ್ಲಿ ತೊಡಗಿದ್ದಾಳೆ. ಮಧುಕರನು ಮನೆಯಲ್ಲಿರಲಿಲ್ಲ. ಇಂಥ ಸಮಯದಲ್ಲಿ ಒಂದು ವಾಹನವು ಮನೆಯ ಮುಂದೆ ಬಂದು ನಿಂತಿತು. ಆದರೊಳಗಿಂದ ಒಬ್ಬ ನವ ಬಾಲಿಕೆಯು ಹರದ ಪದ್ಧತಿಗನುಸಾರವಾಗಿ, ಪೋಷಾಕು ಹಾಕಿಕೊಂಡು, ಇಳಿದು, ಮನೆಯೊಳಗೆ ಹೊಕ್ಕಳು. ಹೊಕ್ಕವಳೇ ದಿನಕರನ ಮುಂದೆ ಹೋಗಿ, ಅಳಲಾರಂಭಿಸಿದಳು. ಅವನು ಘಾಬರಿ ಯಿಂದ ಅವಳನ್ನು ಮೇಲಕ್ಕೆಬ್ಬಿಸಿ,

ದಿನಕರಃ— ಸುಶೀಲೆ! ಸುಶೀಲೆ! ಇದೇನು? ಯಾವಾಗ ಬಂದಿ? ಯಾಕೆ ಅಳುವದು? ಏಳು! ಏಳು! ಏನಾಯಿತು ! ಮನೆಯಲ್ಲಿ ಕ್ಷೇಮವಷ್ಟೇ?

ಈಕೆಯ ರೋದನಕ್ಕೆ ವಿಮಲೆಯು ಒಳಗಿನಿಂದ ಬಂದು ಆಶ್ಚರ್ಯ ಚಕಿತಳಾಗಿ, ಸುಶೀಲಾ ತಾಯಿಯವರೇನು? ಯಾಕೆ ಅಳುವರು?

ಸುಶೀಲೆ:— ಅಣ್ಣಾ, ನಾನು ಹೇಳಲಿ ನಾನು ಮನೆಯಲ್ಲಿಯ ತ್ರಾಸನ್ನು ತಡೆಯದೆ ಇಲ್ಲಿಗೆ ಹೇಳದೆಕೇಳದೆ ಬಂದು ಬಿಟ್ಟೆನು. ನನ್ನ ಜೀವವು ನನಗೆ ಬೇಸರಿಕೆಯಾಗಿದೆ. ಮುಂದೆ ಏನು ಮಾಡಬೇಕೆಂಬ ವಿಚಾರದಲ್ಲಿರುವೆನು ಆದರೆ ನನಗೆ ತೋಚಲಿಲ್ಲ. ನಿನ್ನ ಕಡೆಗೆ ಬಂದೆನು.

ದಿನಕರ:— ಅದೇನಮ್ಮ ಅಂಥ ತ್ರಾಸು ಮನೆಯಲ್ಲಿ? ತಂದೆತಾಯಿಗಳು ಹೊಡೆಯುವರೋ,

ಸುಶೀಲೆ:— ಅದೇ ನಿಲ್ಲಪ್ಪಾ. ಆದರೆ ———

ದಿನಕರ:— ಆದರೆ- ಎಂಬ ಉದ್ಗಾರವೇಕೆ ? ಮರೆ ಮಾಚದೆ ಹೇಳು.

ಸುಶೀಲಾ:— ದಿವಾಕರನು ಕೆಟ್ಟ ಮಾರ್ಗಕ್ಕೆ ಹತ್ತಿರುವನು ಸಣ್ಣ ಪುಟ್ಟ ಕಳವು ಮಾಡಹತ್ತಿದ್ದಾನೆ. ಬೇಡವೆಂದು ಹೇಳಿದರೆ ನನಗೆ ಕಂಗಡಿಬಿನ ಮೇಜವಾನಿಯೇ ಸಿಗುವದು, ಇದಲ್ಲದೆ ಸಂಸಾರದ ಕಷ್ಟ ಬಹಳವಾಗಿದೆ. ಮೇಲಾಗಿ, ನನಗೆ ಲಗ್ನದ ವಿಚಾರವೊಂದು. ತಂದೆತಾಯಿಯವರಂತೂ ನನ್ನ ಸಲುವಾಗಿ, ಬಹಳ ಕ್ಷೀಣರಾಗಿದ್ದಾರೆ. ಕ್ಷೀಣಕ್ಕೆ ಕಾರ

ಣಾಗಿರುವ ವಸ್ತುವೇ ನಾಶವಾದ ಮೇಲೆ ಕ್ಷೀಣರಾಗುವ ಬಗೆ ಹೇಗೆ? ಆದ್ದರಿಂದ ನಾನು ——

ದಿನಕರ:— ಏನು? ನೀನು ಈ ಜಗ್ಗಳದೊಳಗಿಂದ ದೂರಾಗಬೇಕೆನ್ನುವಿಯಾ? ಸುವಿಚಾರ? ಬೇಡ, ನನ್ನ ಜೀವವಿರುವ ತನಕ, ಆ ವಿಚಾರ ಬೇಡ. ನಾನು ಹೇಗಾದರೂ ಮಾಡಿ, ತಂದೆತಾಯಿಯವರನ್ನು ಇಲ್ಲಿಯೇ ಕರಿಸುತ್ತೇನೆ. ಖರ್ಚಿನಲ್ಲ ಖರ್ಚು. ನಿನ್ನನ್ನು ಉತ್ತಮನಾದವನಿಗೆ ಕೊಟ್ಟು ಲಗ್ನ ಮಾಡಿಕೊಡುವೆನು ಸ್ವಸ್ಥವಾಗಿರು.

ಕಡೆಯ ಮಾತು ಕಿವಿಗೆ ಬಿದ್ದಕೂಡಲೇ ಅವಳಿಗೆ ಹಿಡಿಸಲಾರದಷ್ಟು ಆನಂದವಾಯಿತು. ಅವಳು ಮನಸ್ಸಿನಲ್ಲಿಯೇ ಆನಂದಹೊಂದಿದಳು.

•

ಸಂಜೆಯ ಸಮಯ, ಸಣ್ಣ ಹುಡುಗರು ಆಟದಲ್ಲ ತೊಡಗಿವೆ, ದನಕರುಗಳು ತಮ್ಮ ಮನೆಯನ್ನು ಹೊಗಹತ್ತಿವೆ. ಆನಂದರಾಯರು ಮನೆಯಲ್ಲಿಯೇ ಇದ್ದುಕೊಂಡು ಇನ್ನು ಮುಂದೆ ಸಂಸಾರ ನಡೆಯುವ ವಿಚಾರವೇನು. ಲಗ್ನ ಹೇಗಾಗಬೇಕು ಎಂಬೀ ವಿಚಾರದಲ್ಲಿ ಮಗ್ನರಾಗಿದ್ದಾರೆ. ಅಷ್ಟರಲ್ಲಿ ಅಂಚೆಯವನು, ಒಂದು ಓಲೆಯನ್ನು ಕೊಟ್ಟು ಹೋದನು. ಅದನ್ನು ಒಡೆದು ಓದಲಾರಂಭಿಸಿದರು,

ಮುಂಬಯಿ.

ತಿ॥ ರೂ॥ ತಂದೆಯವರಿಗೆ

ದಿನಕರನ ಪೂರ್ಣ ಪ್ರೇಮ ಭರಿತವಾದ ನಮಸ್ಕಾರಗಳು ಉಭಯಕುಶಲೋಪರಿ ಕ್ಷೇಮ. ಈಗ, ಚಿ॥ ಸುಶೀಲಾತಾಯಿಯು ಇಲ್ಲಿಗೆ ಬಂದು ಒಂದೆರಡು ದಿನಗಳಾದವು, ಚಿ॥ ತಮ್ಮನ ರೀತಿ ನಡಾವಳಿ ಕೇಳಿ, ಖೇದವಾಯಿತು. ಆಯಿತು, ದೈವದಲ್ಲಿದ್ದಂತಾಗುವದು. ಈಗ ತಾವು ಕು|| ಸೌ॥ ತಾಯಿ ಚಿ॥ ತಮ್ಮನೊಡಗೂಡಿ ಮುಂಬಯಿಗೆ ಹೊರಟಿದ್ದು ಬರಬೇಕು. ಯಾವ ವಿಚಾರ ಮಾಡಬಾರದು. ಬಂದರೆ ಒಳ್ಳೇದು ಬರದಿದ್ದರೆ ನಾನೇ ಬರಬೇಕಾಗುವದು. ಆದ್ದರಿಂದ ಯಾವ ವಿಚಾರ ಮಾಡದೇ ಬೇಗನೇ ಹೊರಡಬೇಕು. ವಿಳಂಬ ಮಾಡಲು ಕಾರಣವಿಲ್ಲ. ತಿಳಿಯುವದು. ಕು॥ ಸೌ॥ ತಾಯಿಯವರಿಗೆ ನನ್ನ ಮನಃಪೂರ್ವಕ ನಮಸ್ಕಾರಗಳು

ತಮ್ಮ ವಿಧೇಯ.

ದಿನಕರ,

ಆನಂದರಾಯರು ಓದಿ ವರದಾಬಾಯಿಗೆ ತಿಳಿಸಿದರು " ಇದೇನಾಶ್ಚರ್ಯ? ಹೀಗೇಕೆ ಹೊರಟಿದ್ದು ಬರ್ರಿ ಎಂದು ಬರೆದಿರುವನು? ಕಾರಣವೇನಿರಬಹುದು? ಹೊರಡಬೇಕೋ, ಹೊರಡಬಾರದೋ, ಏನೇ ಆಗಲ ನಾಳಿನ ದಿವಸ ಯಾವದನ್ನು ವಿಚಾರಮಾಡದೆ ಹೊರಡೋಣ. ಎಲ್ಲವೂ ಸಿದ್ಧವಿರಲಿ. ನಾನು ಈಗ ಅಡ್ಡಾಡಿ, ಕುಲಪಾತಕನಾದ ದಿವಾಕರನನ್ನು ನೋಡಿಕೊಂಡು ಬರುವೆನೆಂ"ದು ಹೊರಟರು.

" ಹೀಗೆಕೆ ಬರಬೇಕೆಂದು ಬರೆದಿರುವನು. ಕಾರಣವೇ ನಿರಬಹುದು. ದೇವರ ಅನುಗ್ರಹದಿಂದ ನಮ್ಮ ಸುಶೀಲೆಯ ಲಗ್ನವು ಗೊತ್ತಾಗಿರಬಹುದೇನು? ಹಾಗಿದ್ದರೆ ಲಗ್ನಕ್ಕೆ ಬರ ಬೇಕೆಂದು ಬರೆಯುತ್ತಿದ್ದನು. ಯಾವದೂ ಇಲ್ಲದೆ, ವಿಳಂ ಬಮಾಡದೆ ಬರಬೇಕೆಂದು ಬರೆಯುವ ಕಾರಣ ಏನೇ ಇರಲಿ ನನಗಂತೂ ತೋಚಲೊಲ್ಲದು ಹೊರಡೋಣವೆಂದು ಹೇಳಿರು ವರು. ಆಗಲಿ" ಎಂದು ವರದಾಬಾಯಿಯವರು ಅಡಿಗೆಯ ಸಿದ್ಧತೆಗೆ ಹೋದರು. ಮರುದಿವಸ ಮುಂಬಯಿಗೆ ಬಂದು ತಲಪಿದರು. ಎಲ್ಲರಿಗೂ ಆನಂದವೇ ಆನಂದ, ಮಕ್ಕಳಂತೂ ಅಜ್ಜ ಅಜ್ಜಿಯರನ್ನು ಬಿಟ್ಟು ಹೋಗಲೊಲ್ಲವು. ಮನೆಯು ತುಂಬ ಆನಂದವೇ ಆನಂದ. ದಿನಕರನಿಗೂ ಬಹಳ ಆನಂದ ವಾಯಿತು. ಒಂದು ಚಿಂತೆಯು ದೂರಾಯಿತು. ಅವನು ಕ್ಷೇಮ ಸಮಾಚಾರ ವಿಚಾರಿಸುತ್ತ ತಂದೆತಾಯಿಗಳೊಡನೆ ತನ್ನ ಕೋಣೆಯಲ್ಲಿ ಕುಳಿತಿದ್ದ. ಅಷ್ಟರಲ್ಲಿ ಅವನ ಮಿತ್ರ ನೊಬ್ಬ ಬಂದು, ಏನು? ದಿನಕರರಾವ (walking)ಗೆ ಬರು ವದಿಲ್ಲವೋ

ದಿನಕರಃ— ಬರ್ರಿ ಪ್ರಭಾಕರ ರಾಯರೇ, ಬರುವೆನು. ಇದೇ ಈಗ ನಮ್ಮ ತಂದೆತಾಯಿಗಳು ಊರಿಂದ ಬಂದರು. ಕ್ಷೇಮ ಸಮಾಚಾರ ಕೇಳುತಲಿದ್ದೆ. ಕೂತುಕೊಳ್ಳಿರಿ, ಚಹಾತೆಗೆದು ಕೊಂಡು ಹೋಗುವಾ. ಚಹಾಪಾನವಾಯಿತು. ಅವರಿಬ್ಬರು ಆಡ್ಡಾಡಲಿಕ್ಕೆ ಹೋದರು. ನಮ್ಮ ಮಧುಕರನು ತನ್ನ ಮಿತ್ರ ನ ಮನೆಗೆ ಹೋದನು. ಇಲ್ಲವನ್ನು ಬಿಟ್ಟು, ಹೊಸಬ

ನಾದ ದಿವಾಕರನು ಮಾತ್ರ ಎಂದೂ ನೋಡದೆ ಇದ್ದಂಥ ಮುಂಬಯಿ ಪಟ್ಟಣವನ್ನು ನೋಡಬೇಕೆಂದು ಹೊರಟನು.

ಸುಶೀಲೆಯು ಒಂದು ಹದಿನೈದು ದಿನಗಳಾದವು. ಅವಳ ಮುಖದ ಮೇಲಿಂದ ನೋಡಲಾಗಿ ಅವಳು ಈಗ. ಆನಂದ ದಲ್ಲಿದ್ದಳು. ಅವಳು ತನ್ನ ಅಣ್ಣನು ಹೇಳಿದ ಪ್ರಕಾರ, ಯಾವಾಗ ಲಗ್ನ ಮಾಡುವನೋ ಏನೋ ಎಂಬ ವಿಚಾರದಲ್ಲಿ ಯಾವಾಗಲೂ ಕಾಲಕಳೆಯುತ್ತಿದ್ದಳು. ಆನಂದರಾಯರು ವರದಾಬಾಯಿಯವರು, ಮಗನ ಸಂಸಾರವನ್ನು ನೋಡಿ ಚನ್ನಾಗಿ ಸಾಗಿಸುವನೆಂತಲೂ, ಬಹಳ ದಕ್ಷನಿರುವನೆಂತಲೂ ಮನಗಂಡರು. ಮಮ್ಮಕ್ಕಳಂತೂ ಇವರನ್ನು ಬಿಟ್ಟುಹೋಗು ತ್ತಿರಲಿಲ್ಲ. ವಿಮಲೆಯು ಸುಶೀಲಳಿದ್ದು ಹಿರಿಯರ ಆಜ್ಞಾನು ಸಾರವಾಗಿ ನಡೆಯುವಳೂ, ಗಂಡನಲ್ಲಿ ಪ್ರೀತಿಯುಳ್ಳವಳೂ ಆಗಿದ್ದಳು. ಇವಳ ತವರ ಮನೆಯವರು ಆಗರ್ಭ ಶ್ರೀಮಂ ತರು. ಬಹಳ ಪ್ರಮಾಣಿಕರು. ಇವಳು ತವರಮನೆಯಲ್ಲಿ ರುವಾಗಲೂ ಸಹ, ಯಾವಾಗಲೂ ಕೆಲಸದಲ್ಲಿ ತೊಡಗಿರು ವಳು ಉಳಿದ ವೇಳೆಯಲ್ಲಿ ಹೆಣೆಯುವದೂ ಓದುವದೂ ಇವೇ ಕಂಡು ಬರುತ್ತಿದ್ದವು. ಆಕೆಯ ಹಣೆಯಲ್ಲಿ ಬರೆದಂತೆ ದಿನ ಕರನು ತನ್ನನ್ನು ಲಗ್ನವಾದ ನಂತರೂ ಸಹ ಮೊದಲಿನಂ ತೆಯೇ ಅವಳು ಇದ್ದಳು. ಅವಳಿಗೆ ಸೊಕ್ಕು ಅನ್ನುವದು ಗೊತ್ತೇ ಇಲ್ಲಾ. ಮೈದುನರ ಮೇಲೆ ಅವಳ ಮಮತೆ ಬಹಳ ಅತ್ತೆ ಮಾವಂದಿರ ಮಾತು ಕೇಳುತ್ತ ಅವರಂತೆಯೇ ನಡೆಯು

ತ್ರಿಪ್ತಳು. ಇಂಥ ಸೊಸೆಯು ಸಿಕ್ಕ ಮೇಲೆ ಕೇಳುವದೇನು ಇಂಥ ಸೊಸೆಯುಂದಿರು ಸಿಗುವದು ದುರ್ಲಭ. ನಮ್ಮ ವರದಾಬಾಯಿಯುವರೇ ಧನ್ಯ. ಒಟ್ಟಿನ ಮೇಲೆ, ಆನಂದರಾಯರ ಮತ್ತು ವರದಾಬಾಯಿಯವರ ಮನಸ್ಸಿಗೆ, ಸುಶೀಲೆಯ ಲಗ್ನ ಮಧುಕರ ಮತ್ತು ದಿವಾಕರರ ಲಗ್ನವಾಗದ ಹೊರ್ತು, ಸಮಾಧಾನವೆನಿಸದು. ಇಷ್ಟೇ ಅಲ್ಲದೆ, ಅವರಿಗೆ ದಿವಾಕರನ ನಡತೆಯ ಬಗ್ಗೆ ಬಹಳ ಅಂಜಿಕೆಯಿತ್ತು. ಯಾಕಂದರೆ ಎಲ್ಲಿ ಯಾದರೂ, ಏನಾದರೂ, ಮಾಡಿದರೆ ತಮಗೆ ಮಾನ ಹಾನಿ ಆಗುವದು. ಆದ್ದರಿಂದ ಅವನು ಹೇಗೆ ಒಳ್ಳೇ ಮಾರ್ಗಕ್ಕೆ ಹತ್ತುವನೆಂಬ ವಿಚಾರದಲ್ಲಿದ್ದರು.

ದಿನಕರನ ಮನೆಯು ಸಾಧಾರಣ ತರಗತಿದಿದ್ದಿತು. ಮನೆಯ ಮುಂದೆ ಸಣ್ಣ ತೋಟ, ಅವರ ಮನೆಯ ಹತ್ತರವೇ ಒಬ್ಬ ಜಹಾಗೀರದಾರರ ಮನೆ, ಅವರು ಸುಖವಸ್ತುಗಳು. ಅವರಿಗೊಬ್ಬ ಲಕ್ಷ್ಮೀಕಾಂತನೆಂಬೊಬ್ಬ ಮಗ ಅವನು ನಮ್ಮ ದಿನಕರನ ಮಿತ್ರ. ಇಬ್ಬರೂ ಬಿ. ಎ. ಕ್ಲಾಸಿನಲ್ಲಿದ್ದಾಗ ಗೆಳೆತನ. ಈಗೀಗ ಅವನ ಸಂಗಡ ವಿಶೇಷವಿರಲಿಲ್ಲ. ಅವನು ಜಹಾಗೀರದಾರ, ಇದಲ್ಲದೆ ದುಷ್ಟ, ವಿನಯಹೀನ. ವ್ಯಭಿಚಾರಿ, ಮೇಲಾಗಿ ಅವಿವಾಹಿತ. ಅವನದು ಮೊದಲು ಅಷ್ಟಕ್ಕಷ್ಟೇ ದಿನಕರನ ಸಂಗಡ ಗೆಳೆತನವಿದ್ದಿತು. ಆದರೆ ಅವಿವಾಹಿತಳಾದ ಸುಶೀಲೆಯು ದಿನಕರನ ಮನೆಗೆ ಬಂದನಂತರ, ಅವಳ ಮೇಲೆ ಲಕ್ಷ್ಮೀಕಾಂತನ ಒಕ್ರದೃಷ್ಟಿಯು ಬಿದ್ದಿತು. ದಿನಕರನ ಮನೆಗೆ ಹೋಗುವದು, ಬರುವದು ಸುರುವಾ

ಯಿತು. ಏನಿಲ್ಲೆಂದರೂ ದಿನಾಲು ಐದಾರು ಸಾರೆ ಅವನ
ಮನೆಗೆ ಎಡತಾಕುತ್ತಿದ್ದನು. ದಿನಕರ, ಪ್ರಭಾಕರ ಮತ್ತು
ಲಕ್ಷ್ಮೀಕಾಂತ ಮೂವರೂ ಮಿತ್ರರು. ಪ್ರಭಾಕರನು ಪ್ರತಿ
ನಿತ್ಯ ದಿನಕರನಲ್ಲಿ ಬರುತ್ತಿದ್ದನು. ಅವರಿಬ್ಬರು ಪರಮ
ಸ್ನೇಹಿತರು. ಒಬ್ಬರನ್ನಗಲಿ ಒಬ್ಬರಿರುತ್ತಿರಲಿಲ್ಲ. ಅವನಿಗೆ
(ಪ್ರಭಾಕರ) ಲಕ್ಷ್ಮೀಕಾಂತನ ನಡತೆಯು ಸರಿಬರುತ್ತಿದ್ದಿಲ್ಲ.
ದಿನಕರನ ಸಲುವಾಗಿ ಸುಮ್ಮನಿರುತ್ತಿದ್ದನು. ಬರಬರುತ್ತ
ಲಕ್ಷ್ಮೀಕಾಂತನ ಸ್ನೇಹವು ಬೆಳೆಯ ಹತ್ತಲು, ದಿನಕರನಿಗೆ
ಸಂಶಯಕ್ಕೆ ಆಸ್ಪದವುಂಟಾಯಿತು. "ಕೆಲವು ದಿವಸ ಬಿಟ್ಟು
ಈಗ ಮಾತ್ರ ಈ ಲಕ್ಷ್ಮೀಕಾಂತನು ನಮ್ಮ ಮನೆಗೆ ಮೇಲಿಂ
ದಮೇಲೆ ಬರುವ ಕಾರಣವೇನು?" ಅವನಿಗೆ ತಿಳಿಯದಾ
ಯಿತು. ಗೊತ್ತು ಹಚ್ಚಬೇಕೆಂದು ಪಾಳತಿ ಇಟ್ಟನು.

ಆನಂದರಾಯರದು ಮತ್ತು ಗೋಪಾಳರಾಯರದು
(ಲಕ್ಷ್ಮೀಕಾಂತನ ತಂದೆ) ಹೊಸ ಪರಿಚಯವಾಯಿತು. ದಿನ
ದಿನಕ್ಕೆ ಸ್ನೇಹವುಂಟಾಯಿತು. ಒಂದು ದಿನ ಸಾಯಂಕಾ
ಲಕ್ಕೆ ಮಾತಾಡುತ್ತ ಕುಳಿತಾಗ್ಗೆ ಲಗ್ನದ ಮಾತು ಹೊರ
ಟಿತು. ಆನಂದರಾಯರಿಗೆ ಲಕ್ಷ್ಮೀಕಾಂತನು ಅವಿವಾಹಿತ
ನೆಂಬುವದು ಗೊತ್ತಿತ್ತು. ಆದರೆ ಅವನ ನೀತಿ ನಡಾವಳಿಯ
ಪರಿಚಯವಿರಲಿಲ್ಲ. ಅವರ ಮನಸ್ಸಿನಲ್ಲಿ ಸುಶೀಲೆಯನ್ನು
ಗಂಟು ಹಾಕಬೇಕೆಂಬ ವಿಚಾರ ಬಂತು. ನಿಮ್ಮ ಮಗನಿಗೆ
ನಮ್ಮ ಸುಶೀಲಮ್ಮನನ್ನು ಕೊಟ್ಟು ಲಗ್ನ ಮಾಡಿಬಿಡೋಣ
ಹುಡುಗನೂ ಹುಡಿಗೆಯೂ ದೊಡ್ಡವರಾಗಿದ್ದಾರೆ. ಯಾಕೆ?

ನೀವೇನೆನ್ನುವಿರಿ ?" ಗೋಪಾಳರಾಯರಿಗೂ, ಎಷ್ಟು ಅನ್ವೇಷಣ ಮಾಡಿದರೂ ಕನ್ಯೆಯು ಸಿಕ್ಕಿರಲಿಲ್ಲ. ಯಾಕೆಂದರೆ ಮಗನು ದುರ್ವರ್ತನವೆಂಬ, ಗುಡಿಯ ಶಿಖರದ ಮೇಲೆ ಕಳಸ ವಿಟ್ಟಿದ ವ್ಯಭಿಚಾರಿ, ಸುರಾಭಕ್ತ, ನಿಂದಕ ಮುಂತಾದ ಗುಣಗಳಿಗೆ ತವರಮನೆಯಾಗಿದ್ದನು. ತಾನೇ ಕನ್ಯೆಯನ್ನು ಕೊಡಲಿಕ್ಕೆ ಬಂದ ಮೇಲೆ ಹುಅಂದರಾಯಿತೆಂದು ತಿಳಿದು "ಒಳ್ಳೇದು ಆಗಲಿ, ನಾನು ಅದನ್ನೇ ಕೇಳುವವನಿದ್ದೆ. ನೀವೇನು ವರದಕ್ಷಿಣೆಗೆ ಚಿಂತಿಸುವ ಕಾರಣವಿಲ್ಲ. ನಿಮ್ಮ ಯೋಗ್ಯತೆಗನುಸಾರವಾಗಿ ಕೊಡಬಹುದು."

ಇಬ್ಬರೂ ಒಪ್ಪಿಕೊಂಡರು. ಲಗ್ನದ ತಯಾರಿ ನಡೆಸಿದರು. ಆನಂದರಾಯರಂತೂ ಹಳೇ ಪದ್ಧತಿಯವರು. ಅವರಿಗೆ ಕನ್ಯೆಯನ್ನು ಕೇಳಲು ಇಷ್ಟವಿರಲಿಲ್ಲ! ಅವರು ಮನೆಯಲ್ಲಿ ಒಂದೆರಡು ದಿನ ಯಾರಿಗೂ ತಿಳಿಸಲೇ ಇಲ್ಲ.

ಆನಂದರಾಯರು ಪೇಟೆಯಿಂದ ಲಗ್ನದ ಸಾಮಾನು ತಂದು ಹಾಕಲಿಕ್ಕಾರಂಭಿಸಿದರು. ಆಗ ಸುಶೀಲೆಯು ಆಶ್ಚರ್ಯದಿಂದ ತಾಯಿಗೆ,

ಸು:— ಅವ್ವಾ ಇದೇನೆ ! ಈಗೇಕೆ ಇಷ್ಟು ಸಾಮಾನ ತರಿಸುವದು ?

ತಾ:— ನಿನ್ನ ಲಗ್ನವಂತೆ

ಸು:— ಯಾರಿಗೆ ಕೊಟ್ಟದ್ದಾಯಿತು ?

ಅ:— ನಮ್ಮ ಮನೆಯ ಹತ್ತಿರವೇ ಇರುವ ಜಹಗೀರದಾರನ ಮಗನಾದ ಲಕ್ಷ್ಮೀಕಾಂತನಿಗೆ, ಗೊತ್ತಾಗಿದೆ.

ಈ ಮಾತು ಕೇಳಿ ದಿನಕರ ಸುಶೀಲೆಯರೂ ಘಾಬರಿ ಗೊಂಡು ದಿಕ್ಕ ತೋಚದೆ ಕುಳಿತರು. ಮುಂದೆ ಮಾತೇ ಹೊರಡಲೊಲ್ಲವು.

ಆಃ— ಯಾಕೆ, ದಿನಕರ ಹೀಗೇಕೆ ಮಾಡುವದು ?

ದಿನಃ— ತಂದೆಯವರೇ ಆ ಲಕ್ಷ್ಮೀಕಾಂತನಿಗೆ, ಸುಗುಣಿ ಯಾದ ಸುಶೀಲೆಯನ್ನು ಕೊಡುವದು ಬೇಡ. ಮತ್ತಾರಿಗಾ ದರೂ ಬಡವನಿಗೆ ಕೊಡುವದು ಲೇಸು. ಆದರೆ ಆ ಲಕ್ಷ್ಮೀ ಕಾಂತನಿಗೆ ಬೇಡ.

ಆಃ— ನಾನು ಮಾತು ಕೊಟ್ಟಿರುತ್ತೇನೆ, ಪೂರ್ತಿಸಬೇಕಾ ಗುವದು.

ದಿನಃ— ನಿಮ್ಮ ಮಾತು ನಿಮ್ಮ ಬಾಯಿಯಲ್ಲಿ ಆ ಲಗ್ನವು ಬೇಡ, ಹುಡಿಗೆಯ ಒಪ್ಪಿಗೆ ಇಲ್ಲದ ಮೇಲೆ ಮಾಡುವಿರೇನು?

ಆಃ— ಏನು ! ಸುಶೀಲೆಯು ನಿರಾಕರಿಸುವಳೋ ?

ಸುಃ— ಆಹುದು ಈ ಮಾತಿನಲ್ಲಿ ಮಾತ್ರ ನಾನು ನಿರಾಕರಿಸು ವವಳು. ಕ್ಷಮೆ ಇರಲಿ.

ಆಃ— ಆಯಿತು ಎಲ್ಲಿ ಹೋದರೂ ಏನುಮಾಡಿದರೂ ನನ್ನ ಅಪಮಾನವೇ ಅಪಮಾನ. ನನ್ನ 'ದೈವಲೀಲೆಯೇ' ಹೀಗೆ ಇರಬಹುದು.

ಲಗ್ನವು ಮುರಿದಂತಾಯಿತು. ಕಾರಣವು ವಾಚಕ ರಿಗೇ ಗೊತ್ತಾಗಿರಬಹುದು. ಆನಂದರಾಯರಂತೂ ಮುಂದೆ ಲಗ್ನದ ಪ್ರಸ್ತಾಪವನ್ನ ಬಿಟ್ಟರು. ಬರಬರುತ್ತ ಅವರಿಗೆ

ದೇಹದಲ್ಲಿ ಗುಣವಿರಲಿಲ್ಲ. ಅವರಿಗೆ ಮುಂಬಯಿಯ ಹವೆ ತಡೆಯದಂತಾಯಿತು. ಆದ್ದರಿಂದ ಅವರನ್ನು ತಿರುಗಿ ದೇವಗ್ರಾಮಕ್ಕೆ ಕಳಿಸುವ ತಯಾರಿ ನಡೆದಿತು. ಅದರಂತೇಯೇ ಆನಂದರಾಯರು ವರದಾಬಾಯಿಯವರು ಹೊರಟರು. ಸುಶೀಲೆಯು ಮಾತ್ರ ಹೋಗಲಿಲ್ಲ. ಮುಂದೆ ನಾಲ್ಕಾರು ದಿವಸದ ಮೇಲೆ ಕಾಲೇಜಗೆ ಸೂಟಿಯಾದನಂತರ ನಮ್ಮ ಮಧುಕರನು ಹೋದನು. ಕೆಲವು ದಿವಸಗಳ ಪರ್ಯಂತರ ಅವನು ಅಲ್ಲಿಯೇ ಉಳಿದನು. ಅವನೂ ದೊಡ್ಡವನಾಗಿದ್ದನು. ಬಿ ಎ. ಪರೀಕ್ಷೆಯನ್ನು ಕೊಟ್ಟಿದ್ದನು. ಅವನದೊಂದು ಪುನಃ ಲಗ್ನದ ವಿಚಾರವು ನಮ್ಮ ಆನಂದರಾಯರ ತಲೆಯಲ್ಲಿ. ಮೇಲಾಗಿ ಹೆಚ್ಚು ಮನಸ್ಸಿಗೆ ತಾಪಕೊಡುವ ವಿಷಯವೆಂದರೆ, ದಿವಾಕರನದು. ಅವನು ಕೆಟ್ಟ ಮಾರ್ಗ ಹೇಗೆ ಬಿಟ್ಟಾನು ? ಹೇಗೆ ಬುದ್ಧಿ ಬರುವದು? ಹೇಗೆ ನಮ್ಮ ಮಾನವನ್ನು ಕಾಯುವನು ? ಇವೇ ಮುಂತಾದ ವಿಚಾರಗಳಿಂದ ಆನಂದರಾಯರ ತಲೆಯು ಕಾಯ್ದು ಹೋಗಿತ್ತು.

ಮಧುಕರನು ಸಂಜೆಯ ಮುಂದೆ ಚಹಾಪಾನ ತೀರಿಸಿಕೊಂಡು ವಾಚನಾಲಯಕ್ಕೆ ಹೋದನು. ಒಂದು ಪ್ರಸಿದ್ಧವಾದ ಪತ್ರಿಕೆಯನ್ನು ತೆಗೆದು ಓದಲಾರಂಭಿಸಿದನು. ಅಕಸ್ಮಾತ್ತಾಗಿ ಅವನ ಕಣ್ಣಿಗೆ ಒಂದು ಸಂಗತಿಯು ಗೊತ್ತಾಯಿತು. ಅದು ಅವನ ಬಿ. ಎ. ದ ತೇರ್ಗಡೆಯಾದ ಪರಿಣಾಮವಿದ್ದಿತು. ಅದನ್ನು ಓದಿದವನೇ ಆನಂದದಿಂದ ಆನಂದರಾಯರಿಗೆ ತಿಳಿಸಿದನು. ಅವರಿಗಂತೂ ಪರಮಾನಂದ

ನಾಯಿತು. ಮರುದಿವಸ ಮುಂಜಾನೆ ಮುಂಬಯಿಯಿಂ
ತಂತಿ ವರ್ತಮಾನ ಬಂದಿತು. ಅದರಲ್ಲಿ ಲಗ್ನವು ಗೊತ್ತಾ
ಗಿದೆ; ಹೊರಟು ಬರಬೇಕು. ವಿಳಂಬಮಾಡಬಾರದು. ಎಂ
ದ್ದಿತು.

ಸುಶೀಲೆಯು ತಾನೇ ವರಾನ್ವೇಷಣ ಮಾಡಿದವಳಾ
ದ್ದಳು. ಈ ಸಂಗತಿಯನ್ನು ತನ್ನ ಅಣ್ಣನ (ದಿನಕರ) ಮುಂ
ತಿಳಿಸಿದಳು. ದಿನಕರನಿಗೆ ಸಮ್ಮತವಾಯಿತು. ವಿಮಲ
ಬಾಯಿಗಂತೂ ಸಮ್ಮತವಾದದ್ದು ಅಗಾಧದ ಮಾತಲ್ಲ
ಯಾಕಂದರೆ ಮಾಡಿಕೊಳ್ಳುವಾಕೆ, ಮಾಡಿಕೊಳ್ಳುವವ
ಮಾಡಿಕೊಡುವವರು ಸಿದ್ಧರಿದ್ದ ಮೇಲೆ ಉಳಿದವರನ್ನು ಯಾ
ರು ತಾನೆ ಕೇಳುವರು? ಮೇಲಾಗಿ ಸುಶೀಲೆಯು ತಾನೆ, ಆ
ಸಿದವಳು, ತಕ್ಕವನೇ ಇದ್ದನು. ಇವನು ಮತ್ತಾವನಿ
ನಮ್ಮ ಪರಿಚಯದ ಪ್ರಭಾಕರನಾಗಿದ್ದನು-ದಿನಕರನ ಪರಮ
ಸ್ನೇಹಿತ ದಿನಪ್ರತಿ ದಿನಕರನ ಮನೆಗೆ ಬರುವವ. ಇವನನ್ನು
ನೋಡಿದ ಮಾತ್ರವೇ ನಮ್ಮ ಸುಶೀಲೆಯು ಮೋಹಿತಳಾ
ದಳು. ತನ್ನ ಹೃದಯ ದೇವತೆಯಲ್ಲಿ ಆಪ್ತಶೋಧನೆ ಮಾಡ
ಲಿಲ್ಲ. ಹಿರಿಕಿರಿಯರನ್ನು ಕೇಳಲಿಲ್ಲ. ಒಮ್ಮೆಲೆ ಮನಸ್ಸಿನ
ವಿರುದ್ಧವಾಗದೆ ಅವನನ್ನೇ ಲಗ್ನವಾಗುವದಕ್ಕೆ ನಿಶ್ಚಯಿ
ದಳು. ಮಾಡಿಕೊಂಡರೆ ಪ್ರಭಾಕರ; ಇಲ್ಲದಿದ್ದರೆ ಮರಣ
ವೆಂದೆರಡು ಆಕೆಯ ಮಾತುಗಳು. ದಿನಕರನಿಗೆ ಇದು ಗೊತ್ತಾ
ದಕೂಡಲೇ ಅವನು ಸಮ್ಮತಿಸಿ ತಂತಿಯ ಕಳಿಸಿದ್ದನು. ಪ್ರಭಾ
ಕರನ ಸ್ಥಿತಿಯಾದರೂ ನಮ್ಮ ಸುಶೀಲೆಯ ಹಾಗೆಯೇ ಆ

ದ್ದಿತು. ಅವಳ ರೂಪಲಾವಣ್ಯಗಳನ್ನು ನೋಡಿ, ಯಾರು
ತಾನೇ ಮೋಹಿತರಾಗರು ? ಅದರಂತೆಯೇ ನಮ್ಮ ಪ್ರಭಾಕ
ರನು, ನೋಡಿದಾಕ್ಷಣವೇ ಮೋಹಿತನಾದನು, ಅವರವರ
ಮೊದಲಿನ ನೋಟವೇ ಪ್ರೇಮ ಕಟಾಕ್ಷ, ಅವನದೂ ನಿರ್ಧರ
ವಾಯಿತು, ಸುಶೀಲೆಯನ್ನು ಲಗ್ನವಾಗುವದು. ಅವನು
ದಿನಕರನ ಮುಂದೆ ಮಾತ್ರ ಮಾತು ಎತ್ತಿದ್ದಿಲ್ಲ. ಯಾಕೆಂದರೆ
ಸುಶೀಲೆಯು ದಿನಕರನ ಸಹೋದರಿಯೆಂಬುವದು ಅವನಿಗೆ
ಗೊತ್ತಿತ್ತು. ಮೇಲಾಗಿ ಕೊಡುವರೋ ಇಲ್ಲವೋ ಎಂದು
ಅವನು ಭೀತಿಗೊಂಡಿದ್ದನು.

ಕೃಷ್ಣರಾಯರಿಗೆ ಪ್ರಭಾಕರನೊಬ್ಬನೇ ಗಂಡುಮಗ
ಕಮಲೆಯೆಂಬೊಬ್ಬ ಹೆಣ್ಣು ಮಗಳು. ಪ್ರಭಾಕರನಿಗೆ ಇಪ್ಪ
ತ್ತೈದು ವರುಷ. ಸಾಕಷ್ಟು ಶಿಕ್ಷಣವಾಗಿದ್ದಿತು. ಇವನ
ಹೃದಯವು ಹಸುಮಗುವಿನದು. ಮನವು ವಿಶಾಲವಾದುದು.
ಹೆಮ್ಮೆ ಬಿಂಕಗಳಿರಲಿಲ್ಲ. ಮುಚ್ಚಿ ಮಾತನಾಡುವದೆಂದರೆ
ಅವನಿಗೆ ಚೇಳು ಕಡಿದ ಹಾಗೆ. ಬಹಳ ವಿನಯಶಾಲಿ. ಇದ
ಲ್ಲದೆ ಮನೆಯಲ್ಲಿ ಕುಳಿತು ತಿಂದರೂ ಸಹ ಸಾಲುವಷ್ಟು ಆಸ್ತಿ.
ಮೇಲಾಗಿ ಒಬ್ಬನೇ ಒಬ್ಬ ಮಗ. ಕಮಲೆಯು ಲಗ್ನವಾದ
ನಂತರ ತನ್ನ ಮನೆಗೆ ಹೋಗುವವಳು. ಇವಳಿಗೀಗ ಹದಿ
ನಾರು ವರ್ಷ. ಅವಿವಾಹಿತಳು. ಕೋಮಲೆ, ಮೃದುಭಾಷಿಣಿ,
ಮಂದಸ್ಮಿತೆ, ವಿನಯಚರಿತಳು, ಪರರ ಮೇಲೆ ಮಮತೆ ಬಹ
ಳ. ವಿದ್ಯೆಯನ್ನು ಸಾಕಷ್ಟು ಕಲಿತಿದ್ದಳು. ಮನೆಗೆಲಸದಲ್ಲಿ

ಬಹು ದಕ್ಷಳು. ಇವಳಾದರೂ, ನಮ್ಮ ಸುಶೀಲೆಯ ಹಾ
ತನ್ನಿಷ್ಟಕ್ಕೇ ತಾನೇ ವರಾನ್ವೇಷಣ ಮಾಡಿದ್ದಳು. ಅವನ
ಬಡವನಿರಲಿ ಅಗರ್ಭ ಶ್ರೀಮಂತನಿರಲಿ ಒಮ್ಮೆ ಪ್ರೀತಿಯ
ನೆಲಿಸಿತೆಂದರೆ ಅದನ್ನು ಕಿತ್ತಲು ಬರುವದಿಲ್ಲ. ಪ್ರೇಮವು
ಯಾವಾಗ ಉದ್ಭವಿಸುವದೋ ಪರಮಾತ್ಮನೇ ಬಲ್ಲ. ಬರಿ
ದಾದ ಮೋಡಗಳು ಕೂಡಲೇ ಮಳೆಯಿಂದ ತುಂಬು
ವಂತೆ, ಹೃದಯವು ಕೂಡ, ಪ್ರೇಮದಿಂದ ತುಂಬುವದು.
ಈ ಪ್ರೇಮವು ಒಮ್ಮೆ ನೆಲೆಸಿತೆಂದರೆ, ಅದರ ಬೇರನ್ನು
ಕೂಡ ಕಿತ್ತು ಹಾಕುವದು ಅಸಾಧ್ಯವಾಗುವದು. ಅದ
ರಂತೆಯೇ ನಮ್ಮ ಕೃಷ್ಣರಾಯರ ಮಗಳಾದ ಕಮಲೆಯ
ಸ್ಥಿತಿಯಾಯಿತು. ಅವಳದೊಮ್ಮೆ ಪ್ರೇಮವು ಮಧುಕರನಲ್ಲಿ
ಸಿಲುಕಿದ್ದಿತು. ಅದು ಮೊದಲು ತನ್ನಂಥ ಅವಿವಾಹಿತಳಾದ
ತರುಣಿಗೆ ತಕ್ಕದ್ದಲ್ಲವೆಂದು ತೋರಿದರೂ ಕೂಡ, ಅದನ್ನು
ಕಿತ್ತಲಿಕ್ಕಾಗಲಿಲ್ಲ. ಆದ್ದರಿಂದ ಅವಳು ತನ್ನ ಅಣ್ಣನ ಮುಂದೆ
ಪ್ರಸ್ತಾಪವನ್ನು ಬೆಳಸಿ ಹೇಳಿದಳು ಅವನು ಹಿಂದೆ ಮುಂದೆ
ವಿಚಾರ ಮಾಡದೆ, ಅವಳ ಮಾತಿಗೆ ಅನುಮತಿ ಕೊಟ್ಟನು.
ಆದರೆ, ಕೃಷ್ಣರಾಯರಿಗೆ ಮನಸ್ಸಿರಲಿಲ್ಲ. ಯಾಕೆಂದರೆ ಬಡ
ವರೆಂಬದೊಂದು ಅವರ ನಕಾರದ ಕಾರಣವು. ಉಪಾಯ
ಗಾಣದೆ, 'ದೈವದಲ್ಲಿದ್ದಂತಾಗಲೆಂದು ಮಗನಮಾತಿಗೆ ಸಮ್ಮ
ತಿಸಿದರು. ಇಬ್ಬರೂ ಒಂದೇ ಊರವರು. ಪ್ರಭಾಕರ ಮಧು
ಕರರು ಕಲಿತವರಾದ್ದರಿಂದ ವರದಕ್ಷಣೆಯ ಆಶೆಮಾಡದೆ

ಸಮ್ಮತಿಸಿದರು. ಲಗ್ನವು ನಿಶ್ಚಯವಾದನಂತರ ದಿನಕರನು ತಂದೆಗೆ ತಂತಿಯನ್ನು ಹೊಡೆದಿದ್ದನು.

ದಿನಕರನ ಮನೆಯ ಮುಂದೆ ಒಂದು ವಿಕ್ಟೋರಿಯ ಬಂದು ನಿಂತಿತು. ಆದರೊಳಗಿಂದ ಆನಂದರಾಯರು ವರದಾಬಾಯಿ ಮತ್ತು ಮಧುಕರರು ಇಳಿದರು. ಅವನು ಅಂದೇ ಕಮಲೆಯನ್ನು ನೋಡಲಿಕ್ಕೆ ಹೋಗುವವನಿದ್ದನು. ಮೊದಲೇ ನೋಡಿದ್ದನು. ಆದರೆ, ಶಿಷ್ಟಾಚಾರಗನುಸಾರವಾಗಿ ಹೋಗಬೇಕಾಗಿತ್ತು. ಇವತ್ತು ಕಮಲೆಯು ತನ್ನ ಭಾವಿ ಪತಿರಾಜರಾದ ಮಧುಕರರು ಬರುವರೆಂದು ತಿಳಿದಿದ್ದಳು. ಆಕೆಯ ಆನಂದವನ್ನು ಹೇಳಲಾಸಲ್ಲ. "ಅವರು ಯಾವಾಗ ಬರುವರೋ? ನಾನು ಅವರೆದುರಿಗೆ ಹೇಗೆ ನಿಂತು ಮಾತಾಡಬೇಕೋ?" ಅವನು ಬರುವ ದಾರಿಯನ್ನೇ ನೋಡುತಿದ್ದಳು.

ಇತ್ತ ಪ್ರಭಾಕರನು ಸಹ ಶಿಷ್ಟಾಚಾರಕ್ಕನುಸಾರವಾಗಿ ಸುಶೀಲೆಯನ್ನು ನೋಡಲಿಕ್ಕೆ ಬರುವವನಿದ್ದನು. ಆದರೆ ಸುಶೀಲೆಯ ಮನದಲ್ಲಿ ಬೇರೊಂದು ವಿಚಾರವು ನಡೆದಿತ್ತು. ಪತಿರಾಯರು ಬಂದ ಮೇಲೆ ಅವರಿಗೆ ಸರಿಯಾದ ಉತ್ತರವನ್ನು ಹೇಗೆ ಕೊಡುವೆನೆಂಬ ಪ್ರಶ್ನೆಯು ಅವಳೆದುರಿಗೆ ಬಂದು ನಿಂತಿತ್ತು. ಅವಳಿಗೆ ಉಳಿದ ಭಯವೇನಿರಲಿಲ್ಲ. ಯಾಕಂದರೆ ಅವನು ಮೇಲಿಂದ ಮೇಲೆ ಇವರ ಮನೆಗೆ ಬರುತಲಿದ್ದ. ಆದರೆ ಅವನ ಸಂಗಡ ಒಮ್ಮೆಯಾದರೂ ಮಾತನಾಡಿರಲಿಲ್ಲ. ಕಡೆಗೆ ಏನೋ ನಿಶ್ಚಯಿಸಿಕೊಂಡಳು. ಅಷ್ಟರಲ್ಲಿ ಗಾಡಿಯೊಂ

ದು ತಮ್ಮ ಮನೆಯ ಮುಂದೆ ಬಂದು ನಿಲ್ಲಲು, ಇಷ್ಟು ಹೊತ್ತಿನ ವರೆಗೆ ಸುಶೀಲೆಯು ನಿಶ್ಚಯಿಸಿಕೊಂಡ ವಿಚಾರಗಳೆಲ್ಲವನ್ನು ನಾಶಮಾಡಿತು. ಈಗ ಮಾತ್ರ ಸುಶೀಲೆಯ ಎದೆಯು ಥಡ, ಥಡ,' ಎಂದು ಹಾರತೊಡಗಿ, " ಮುಂದೆ ಇನ್ನೇನು ಗತಿ' ಎಂದು ಮನಸದಲ್ಲಿ ಬಂತೋ ಇಲ್ಲೋ ? ಅಹ! ಕಮಲೆ, ತಾಯೀ ತಾಯೀ ಎಲ್ಲಿರುವಿಯೋ, ನಿನ್ನನ್ನು ನೋಡಲು ಬಂದಿರುವರು ಬೇಗ ಬಾ ತಡಮಾಡಬಾರದು. ಒಂದು ಸಲ, ಸುಶೀಲೆಯು ಧೈರ್ಯವನ್ನು ತಂದುಕೊಂಡು, ಪ್ರಭಾಕರನೆದುರಿಗೆ ಕದ್ದು ಕದ್ದು ಅವನನ್ನು ನೋಡುತ್ತ ನಿಂತಳು. ಅವನ ಎಲ್ಲ ಪ್ರಶ್ನಗಳಿಗೆ ದಿಟವಾಗಿ ಉತ್ತರವನ್ನು ಹೇಳಿ ಒಳಗೆ ಹೋದಳು. " ಸಮ್ಮತವಾಯಿತು ಹುಡಿಗೆ ಮನಸ್ಸಿಗೆ ಬಂತು,, ಎಂದು ಹೇಳಿ ಕೃಷ್ಣರಾಯರು ಮಗನೊಡಗೂಡಿ ಮನೆಗೆ ಹೋದರು.

ನಮ್ಮ ಆನಂದರಾಯರು, ವರದಾಬಾಯಿ ಮಧುಕರ ಮುಂತಾದವರೆಲ್ಲರೂ ಕೂಡಿ, ಕಮಲೆಯನ್ನು ನೋಡಿಕೊಂಡು ಬಂದರು. ಲಗ್ನವು ನಿಶ್ಚಯವಾಯಿತು. ಆಪ್ತರಿಷ್ಟರೆಲ್ಲರೂ ಬಂದರು. ಆಯಿತು, ಲಗ್ನಗಳೆರಡೂ ಒಳ್ಳೇ ಆರ್ಭಟಿಯಿಂದ ಜರಗಿದವು. ಯಾವ ತರದ ನ್ಯೂನತೆಗಳಾಗಲಿಲ್ಲ. ಬಂದ ಆಪ್ತರಿಷ್ಟರು ತಮ್ಮ ತಮ್ಮ ಊರಿಗೆ ಹೊರಟು ಹೋದರು. ಕೆಲವು ದಿವಸ ನಿಂತು, ಆನಂದರಾಯರು, ಸುಶೀಲೆಯನ್ನು ಕರೆಕೊಂಡು ತಮ್ಮೂರಿಗೆ ಹೋದರು. ಅವರ ಮನಸ್ಸಿ

ನಂತೆ ಎಲ್ಲವೂ ಆಯಿತು. ಮಧುಕರನೂ ದೊಡ್ಡ ನವಕರಿ ಯಲ್ಲಿ ಸೇರಿದನು. ಆದರೆ ಆವರಿಗೆ ಒಂದೇ ಒಂದು ಚಿಂತೆ ಆದು ದಿವಾಕರನದು. ಆವನನ್ನು ಎಷ್ಟು ಹುಡುಕಿದರೂ ಸಿಗಲಿಲ್ಲ, ಲಗ್ನಕ್ಕೆ ಬರಲಿಲ್ಲ. ಹೀಗಾಗಿ ಅವರಿಗೆ (ಆನಂದ ರಾಯ ವರದಾಬಾಯಿ) ಇದೊಂದು ಚಿಂತೆ ಒಟ್ಟಿನ ಮೇಲೆ ವೈವಲೀಲೆಯಂತೆ, ಆಗುವದೆಂದು ಸ್ವಸ್ಥ ಕುಳಿತರು.

ಈಗ ನಮ್ಮ ಸುಶೀಲೆಯು ಗಂಡನ ಮನೆಯಲ್ಲಿರ ಹತ್ತಿ ದ್ದಾಳೆ. ಆವಳಿಗೆ ಎಲ್ಲತರದ ಸುಖವಿದ್ದಿತು. ಕಮ ಲೆಯಂತೂ ಎಂದೋ ಅತ್ತೆಯ ಮನೆಗೆ ಬಂದು ಬಿಟ್ಟಿದ್ದಳು. ಆರ್ಭಟೆಯಿಂದ ನಮ್ಮ ದಿನಕರ ಮಧುಕರರ ಸಂಸಾರವು ನಡೆದಿತ್ತು ಏನೋ ಲಗ್ನಕ್ಕೆ ಸ್ವಲ್ಪ ಸಾಲವಾಯಿತೆಂಬದಷ್ಟೇ ಚಿಂತೆ. ಹೇಗಾದರು ತಿರಿಸ ಬಹುದೆಂಬ ನಂಬಿಕೆಯು ಆವರಿ ಗಿದ್ದಿತು. ಮೇಲಿಂದ ಮೇಲೆ ರಜೆ ತೆಗೆದುಕೊಂಡು ಇಬ್ಬರೂ ತಂದೆತಾಯಿಗಳ ದರ್ಶನವನ್ನು ತೆಗೆದುಕೊಂಡು ಬರುತ್ತಿದ್ದರು ಆನಂದರಾಯರಿಗೆ ಸುಶೀಲೆಯ ಚಿಂತೆಯು ತಪ್ಪಿ, ಆದರಸ್ಥಳ ದಲ್ಲಿ 'ಸಾಲವೆಂಬ ಮೃತ್ಯುವು ಬಂದು ಕುಳಿತಿತ್ತು. ಆದರೂ ಮಕ್ಕಳು ದುಡಿಯುವರು. ಬೇಗನೆ ತೀರ ಬಹುದೆಂಬ ನಂಬಿ ಕೆಯು ಆವರಿಗೂ ಕೂಡ ಇತ್ತು. ಅವರಿಗೆ ವಯಸ್ಸು ಬಹ ಳಾಗುತ್ತ ಬಂದಿದ್ದವು. ಮೈಯಲ್ಲಿ ನೆಟ್ಟಗಿರಲಿಲ್ಲ ಬೇಗನೆ ಈ ಜಗತ್ತನ್ನು ಬಿಟ್ಟು ಹೋಗುವದು ಒಳಿತೆನ್ನುತ್ತಿದ್ದರು. ಇಂಥ ದುರ್ನಡತೆಯು ಹೆಂಡತಿಯುಂಬುವಳಿಗೆ ಸರಿ ಬರುವದೇ ಇಲ್ಲ. ಅದರಂತೆಯೇ ಮನೆಯಲ್ಲಿ ವರದಾಬಾಯಿಯುವರಿಗೆ

ಸರಿಬರುತ್ತಿರಲಿಲ್ಲ. ಹೀಗಾಗಿ ಅವರಲ್ಲಿ ಸ್ವಲ್ಪ ಶಬ್ದಗಳ ಕೋಲಾಹಲವಾಗುತ್ತಿತ್ತು.

ದಿನಕರ ಮಧುಕರರು ಅದೇ ಕೆಲಸ ತೀರಿಸಿಕೊಂಡು ಬಂದು ಕುಳಿತಿದ್ದರು. ಚಹಾಪಾನವಾಯಿತು. ಪ್ರತಿದಿವಸದಂತೆ, ವರ್ತಮಾನ ಪತ್ರವು ಬಂದಿತು. ಅದನ್ನು ರೂಢಿಯಂತೆ, ಮಧುಕರನು ಓದಲಾರಂಭಿಸಿದನು. ಓದ ಓದುತ್ತ ಪುಟದ ಕೆಳಗಿನ ಮಜಕೂರು ಅವನ ದೃಷ್ಟಿಗೆ ಬಿದ್ದಿತು.

" ಸುಮಾರು ೩೦ ವರ್ಷದ ತರುಣನೊಬ್ಬನು ಏನೋ ಕೆಟ್ಟ ಕೆಲಸಮಾಡಿ ಅಪಮಾನವನ್ನು ಸಹಿಸದೆ ಸಮುದ್ರದಲ್ಲಿ ಹಾರಿಕೊಂಡು ಸತ್ತನು. ಅವನ ಪ್ರೇತವು ಈದಿವಸ ಮುಂಜಾನೆ ಸಿಕ್ಕಿತು. ಅದನ್ನು ದವಾಖಾನೆಗೆ ಒಯ್ಯಲಾಗಿ ಡಾಕ್ಟರರು ಜೀವವಿಲ್ಲೆಂದು ಹೇಳಿದರು. ಈ ಪ್ರೇತವು ಯಾರಿಗಾದರೂ ಸಂಭಂಧಿಸಿದ್ದರೆ ನಾಳಿನ ವಳಗಾಗಿ ಬಂದು ನೋಡಿ ಹೋಗಬೇಕು.

"ಇವನ್ನು ಓದಿದ ಮಧುಕರನು, ಇವನು ನಮ್ಮ ಅಣ್ಣನಾಗಿರ ಬಹುದೇನು? ಆಗಿರಬಹುದು. ಯಾಕಂದರೆ ಅವನು ಕೆಟ್ಟಕೆಲಸಗಳಲ್ಲಿ ತೊಡಗಿದ್ದೇನೋ ನಿಜ. ಏನೇ ಆಗಲಿ, ಅಣ್ಣನಿಗೆ (ದಿನಕರ) ತಿಳಿಸಿ ನೋಡಿಕೊಂಡು ಬರುವೆನು." ಅವನು ಅಲ್ಲಿಂದೆದ್ದು ಪತ್ರವನ್ನು ಅಲ್ಲಿಯೇ ಬಿಟ್ಟು ಅಸ್ಪತ್ರಿಗೆ ಹೋದನು. ಅಲ್ಲಿ ಜನಜಾತ್ರಿ ನೆರೆದಿತ್ತು. ಇವನಿಗೆ ಒಳ

ಹೋಗಲಿಕ್ಕೆ ಮಾರ್ಗವೇ ಇದ್ದಿದ್ದಿಲ್ಲ. ಕೂಡಿದ ಮಂದಿ ಯಾವನೋ ಮಹಾರಾಯಾ ಪುಣ್ಯಮಾಡಿದ ಕೆಟ್ಟಕೆಲಸಮಾಡುವದರಿಂದ ಮುಕ್ತನಾದನೆಂದು ಅನ್ನುತ್ತಿದ್ದರು." ಇವನ (ಮಧುಕರನ)ಎದೆಯು 'ಧಭ, 'ಧಭ, ಎಂದು ಹಾರುತ್ತಲಿದ್ದಿತು. ಒಳನುಗ್ಗಿ ಹೋಗಿ ನೋಡಲಾಗಿ ತನ್ನ ಅಣ್ಣನ ಪ್ರೇತವಾಗಿತ್ತು. ಅವನು ಅಳಲಾರಂಭಿಸಿದನು. ದಿನಕರನೂ ಬಂದನು. ಕಡೆಗೆ ಕರ್ಮದಂತೆ ಫಲವೆಂದು ತಿಳಿದು ಅವನ ವ್ಯವಸ್ಥೆ ಮಾಡಿ ಮನೆಗೆ ಬಂದರು. ಕೆಲವು ದಿನಗಳಾದನಂತರ ಮಧುಕರನೇ ದೇವಗ್ರಾಮಕ್ಕೆ ಹೋದನು. ಅವನಿಗೆ ಒಳಗೆ ಹೋಗುವ ಮೊದಲು ಎದೆಯು ಜೋರಿನಿಂದ ಹಾರಲಾರಂಭಿಸಿತು. ಅವನು ತಟಸ್ಥನಾಗಿ ನಿಂತು ಬಿಟ್ಟನು. ಸುದ್ದಿ ಹೇಳಲೋ ಬೇಡೋ, ಹೇಳಿದರೆ ಒಂದು ಸಂಕಟ; ಹೇಳದಿದ್ದರೆ ಮತ್ತೊಂದು ಸಂಕಟ" ಹೀಗಾಗಿ ಅವನು ಏನೂ ತೋಚದೆ, ಹೇಳಬಾರದೆಂದು ನಿಶ್ಚಯಿಸಿಕೊಂಡು ಜೋಲುಮಾರಿ ಹಾಕಿಕೊಂಡು ಒಳಗೆ ಕಾಲಿಟ್ಟನು. ಅವನ ಪುಣ್ಯವೆಂದು ತಿಳಿಯಬೇಕು. ಅವನ ತಂದೆಯು ತಾಯಿಯುವರೂ ಮನೆಯಲ್ಲಿರಲಿಲ್ಲ. ಒಕ್ಕಲಗಿತ್ತಿಯೊಬ್ಬಳು, ಕಸವನ್ನು ಗೂಡಿಸುತ್ತಿದ್ದಳು. ಮಧುಕರನನ್ನು ನೋಡಿದವಳೇ "ಸಂಣರಾಯರು ಬಂದರು" ಅವ್ವನವರನ್ನು ಕರೆಯುವೆನು, ಎಂದು ಹೊರಡುವವಳಿದ್ದಳು ಆದರೆ ಅವಳು ಮಧುಕರನಿಂದ ತಡೆಯಲ್ಪಟ್ಟಳು. "ಬೇಡ ಈಗ ಕರೆಯಬೇಡ ಸಾವಕಾಶವಾಗಿ ಬರಲಿ, ನಾನು ಹೊರಗೆ ಹೋಗಿ ಆಡ್ಡಾಡಿ ಬರುತ್ತೇನೆ,ಂದು

ಹೇಳಿ ಹೋದನು. ಸಂಜೆಯು ಮುಂದೆ ಮನೆಗೆ ಬಂದು ಊಟ ಮಾಡಿ ಮಲಗಿಕೊಂಡನು. ನಿದ್ರೆಯಲ್ಲಿದೆ ಅವನಿಗೆ ಅದೇ ವಿಚಾರ “ ಹೇಳಿದರೆ ಹ್ಯಾಗೆ ಹೇಳದಿದ್ದರೆ ಹ್ಯಾಗೆ?” ಹೇಳ ಬೇಕೆಂದರೆ ಅವನ ಬಾಯಿಂದ ಮಾತುಗಳೇ ಹೊರಡಲೊಲ್ಲವು ಅವನು ಮರುದಿವಸವೆದ್ದು ಹೋಗಿ ಬರುವೆನೆಂದು ಹೇಳಿ ಮುಂಬಯಿಗೆ ಹೋದನು. ತಾಯಿಯು “ ಈಗ ಯಾತಕ್ಕೆ ಬಂದಿದ್ದ ಇಷ್ಟು ಅವಸರದಿಂದ ಹೋಗುವ ಕಾರಣವೇನು?” “ಯಾರಿಗೆ ಗೊತ್ತು ತನ್ನ ಮಿತ್ರರ ಸಂಗಡ ಬಂದಿರಬಹುದು. ಎಂದು ಆನಂದರಾಯರು ಹೇಳಿದರು.

ರವಿವಾರ ಮುಂಜಾನೆ ಸುಮಾರು ಹತ್ತು ಘಂಟೆಯಾ ಗಿರಬಹುದು. ಆನಂದರಾಯರ ಮನೆಯ ಮುಂದೆ ಒಂದು ಗಾಡಿಯು ಬಂದು ನಿಂತಿತು. ಅದು ತುಂಬಿ ಹೋಗಿತ್ತು. ಅದರಲ್ಲಿ ಒಬ್ಬಿಬ್ಬರು ಜಡ್ಡಿನವರಿರಬಹುದೆಂದು ತಿಳಿದು ಬರು ತ್ತಿತ್ತು. ಯಾಕಂದ್ರೆ ಗಾದಿ ತಲೆದಿಂಬುಗಳನ್ನಿಟ್ಟು ಅದನ್ನು ಮೆತ್ತಗೆ ಮಾಡಿ, ಎಲ್ಲಿಂದಲೂ ಗಾಳಿ ಬರದಂತೆ ಮಾಡಿದ್ದರು. ಗಾಡಿಯವನಾದರೂ ಸಾವಕಾಶವಾಗಿ ಹೊಡೆಯುತ್ತಲಿದ್ದ. ಆನಂದರಾಯರು ತ್ರಾಣವಿಲ್ಲದವರಾಗಿ ಕುಳಿತಲ್ಲಿಯೇ ಕುಳಿತು ಹೆಂಡತಿಯನ್ನು ಒದರಿದರು “ನೋಡು ಯಾರು ಬಂದರು”

ಇಬ್ಬರು ತೋಳುಗಳಲ್ಲಿ ಕೈಯನ್ನು ಹಾಕಿ ಒಬ್ಬನನ್ನು ಒಳಗೆ ಕರೆದುಕೊಂಡು ಹೋದರು. ಪುನಃ ಒಬ್ಬ ಸ್ತ್ರೀಯು ಸಣ್ಣ ಮಗುವನ್ನು ತುಂಬಾ ಮುಚ್ಚಿಕೊಂಡು ಕಳೆಗುಂದಿದ

ವಳಾಗಿ ಬಿಕ್ಕಿ ಬಿಕ್ಕಿ ಅಳುತ್ತ ಒಳಗೆ ಪ್ರವೇಶ ಮಾಡಿದಳು. ಒಳಗೆ ಗಾದಿ ಹಾಸಿ, ಅವರನ್ನು ಮಲಗಿಸಿದರು. ಆನಂದ ರಾಯರು “ ಅಯ್ಯೋ ನನ್ನ ದೈವವೇ ನನ್ನ ಮುಂದೆ ನೀವು ಹೀಗೆ ಹಾಸಿಗೆ ಹಿಡಿದು ಮಲಗಬೇಕೆ, ಲಕ್ಷಣಗಳು ನೆಟ್ಟಗೆ ಕಾಣುವದಿಲ್ಲ. ಅಲ್ಲಿ ಔಷಧ ಉಪಚಾರ ಬಿಟ್ಟು ಇಲ್ಲಿಗೇತಕ್ಕೆ ಬಂದಿರಿ” ಎಂದು ಅಳಹತ್ತಿದನು. 'ವಾಚಕರೇ, ರೋಗಿಯು ಮುತ್ತಾವನಿರದೇ ನಮ್ಮ ದಿನಕರನಿದ್ದನು, ವ ಮತ್ತೊಂದು ಮಗುವು ಅವನದೇ ಇಬ್ಬರು ಪ್ಲೇಗೆಂಬ 'ಬೇನೆಯಿಂದ ಪೀಡಿತರಾಗಿದ್ದರು. ಮಧುಕರನು ರಜೆ ತೆಗೆದುಕೊಂಡು ತನ್ನ ಅಣ್ಣನನ್ನು ಹೆಂಡತಿ (ವಿಮಲೆ) ಇಬ್ಬರು ಮಕ್ಕಳನ್ನೂ ತನ್ನ ಹೆಂಡತಿ [ಕಮಲೆ] ಇವರನ್ನು ಕರೆದುಕೊಂಡು ಬಂದಿದ್ದನು. ಡಾಕ್ಟರನು ಮುಂಬಯಿಯ ಹವೆಯು ಕೆಟ್ಟದ್ದು ಆದ್ದರಿಂದ ಹವೆ ಬದಲಾವಣೆಯ ಸಲುವಾಗಿ, ಅವರನ್ನು ಇಲ್ಲಿಗೆ ಕರೆದು ಕೊಂಡು ಹೋಗೆಂದು ಮಧುಕರನಿಗೆ ಹೇಳಿದ ಪ್ರಕಾರ ಅವನು ಅವರೆಲ್ಲರನ್ನು ಕರೆತಂದಿದ್ದನು.

ಸಂಧ್ಯಾಸಮಯ ತಾಮ್ರವರ್ಣ ಪೂರಿತನಾದ ದಿನಮಣಿಯ ಉಗ್ರದೃಷ್ಟಿಯು ಮಾಯವಾಗಹತ್ತಿದೆ. ಸೃಷ್ಟಿಯ ಮೇಲೆ ತುಸು ತುಸು ಧವಳಾಕಶದ ಉಲ್ಲಸಿತವಾದ ಬೆಳಕು ಬೀಳುತ್ತಲಿದೆ. ಹಿತ್ತಲ ಮನೆಯಲ್ಲಿ ನಮ್ಮ ವಿಮಲೆಯು ಅಕ್ಕಿಯನ್ನು ಕೇರುತ್ತಾ ಇದ್ದಾಳೆ, ವಿಮಲೆಯು ಒಮ್ಮೊಮ್ಮೆ ಕೇರುವದನ್ನು ನಿಲ್ಲಿಸಿ, ತನ್ನ ಗಂಡನ ವಿಷ

ಯವಾಗಿ ಚಿಂತಿಸುವಳು. " ದೇವರೆ ಜಾಡ್ಯವನ್ನು ಬೇಗನೆ ಇಲ್ಲದಂತೆ ಮಾಡು ಸತ್ಯನಾರಾಯಣನ ಪೂಜೆಯನ್ನು ಮಾಡಿಸುವೆನು. ಹನುಮಂತದೇವರಿಗೆ ಐದು ಟೆಂಗಿನಕಾಯಿಗಳನ್ನು ಒಡಿಸುವೆನು, ವೆಂಕಟರಮಣನಿಗೆ ಮುಡುಪು ಕಳಿಸುವೆನು" ಹೀಗೆ ವಿಚಾರಮಾಡುತ್ತ ಕುಳಿತಿದ್ದಾಳೆ. ಅವಳಿಗೆ ಅವನದೇ ಧ್ಯಾನ. ಆಕೆಯದು ಯಾತರದೂ ಇಚ್ಛೆಯಿರಲಿಲ್ಲ. ಪತಿ ಪ್ರೇಮವೇ ಅವಳ ಹೃದಯರವನ್ನು ವ್ಯಾಪಿಸಿತ್ತು. ಅವಳಿಗೆ ಅವನು ನೆಟ್ಟಗಾದರೆ ಸಾಕಾಗಿತ್ತು.

" ಅವ್ವಾ ವೈದ್ಯನನ್ನು ಕರೆಯಿಸು, ಮಧುಕರನು ಬಂದನೇ" ಎಂದು ದಿನಕರನು ಕೇಳಿದನು.

" ಅಪ್ಪಾ ಬಂದಿಲ್ಲ" ಕರೆಯಿಸುತ್ತೇನೆಂದು ಹೊರಗೆ ಹೋದಳು.

" ನಾನು ಸಾಯುತ್ತೇನೆ. ಇನ್ನು ಮುಂದೆ ನನ್ನ ತಂದೆ ತಾಯಿಗಳ ಹೆಂಡತಿ ಮಕ್ಕಳ ಗತಿಯೇನು? ಅಯ್ಯೋ ದೇವಾ ನನ್ನನ್ನು ಬೇಗನೇ ಕರದೊಯ್ಯಿ, ಎಂದು" ಅತಿಶಯವಾಗಿ ಅಳಹತ್ತಿದನು.

ವಿಮಲೆಯು ಘಾಬರಿಯಾಗಿ ಹಿತ್ತಲಿಂದ ಓಡಿಬಂದು, ಗಂಡನ ಹತ್ತರ ಕುಳಿತು, " ಹೀಗೇಕೆ ಮಾಡುವದು ? ಅಭದ್ರ ನುಡಿಯಬೇಡಿರಿ, "ದೈವದಲ್ಲಿದ್ದಂತಾಗುವದು, ಮನಸ್ಸಿಗೆ ವ್ಯಥೆಯಾಗುವದು ಒದರಿದರೆ"

" ವೈದ್ಯನು ಬಂದನೆ ? ಮಧುಕರನು ಬಂದನೆ ! ಅಪ್ಪ
ಲ್ಲಿರುವನು? ಹುಡುಗರೆಲ್ಲಿ? " "ಎಲ್ಲರೂ ಇಲ್ಲಿಯೇ ಇದ್ದಾರೆ
ವೈದ್ಯನು ಸಹ ಬರಬಹುದು."

ಎಲ್ಲರೂ ದಿನಕರ ಹತ್ತಿರವೇ ಕುಳಿತಿದ್ದರು, ಅಷ್ಟರಲ್ಲಿ
ವೈದ್ಯನು ಬಂದು, " ಪ್ರಕೃತಿ ಹೇಗದೆ? ಏನಾದರೂ ಅರಾ
ಮವೆನಿಸುತ್ತದಯೋ ? "

" ವೈದ್ಯರೇ ಎನೊ ಎಂತೊ ! ನನ್ನನ್ನು ಬೇಗನೇ
ಈ ಜಗತ್ತಿನಿಂದ ಪಾರಮಾಡಿರಿ" ವೈದ್ಯನು ನಾಡಿಪರೀಕ್ಷೆ
ಮಾಡಿ ಔಷದ ಉಪಚ್ಯಾರವು ಚನ್ನಾಗಿರಲಿ, ನಾನು ಪುನ:
ನಾಳಿನ ದಿವಸ ಬರುತ್ತೇನೆ " ಮುಂದೆ ಒಂದು ತಾಸಿನ ಮೇ
ಮಧುಕರನು ಜೋಲು ಮೋರೆ ಮಾಡಿಕೊಂಡು ಬಂದು
ಮ್ಮನೆ ಕುಳಿತು ಬಿಟ್ಟನು. ಅಣ್ಣನನ್ನು ನೋಡಿ ಮತ್ತಿಷ್ಟು
ಪ್ಪಾಗಿ ಕುಳಿತನು. ಮಾತೇ ಹೊರಡಲೊಲ್ಲವು. ಯಾರು
ಮಾತನಾಡಿಸಿದರೂ, ಮೌನಾವತಾರಧಾರಣಮಾಡಿದ್ದನು.
ಟ್ಟಕಡೆಗೆ ನಿರುಪಾಯನಾಗಿ ತಂದೆಯ ಮಾತಿಗೆ, "ಈಗ
ದೆನು, ಸುಶೀಲೆಯ ಮೈಯಲ್ಲಿ ಸ್ವಲ್ಪ ಅಸ್ವಸ್ಥತೆ, ಆದ್ದ
ದ ಆವಾಗ ಹೇಳಲು ಸಂಕೋಚಗೊಂಡೆ "

ಆನಂದರಾಯರು ದಿಗಿಲು ಬಡಿದು ಕುಳಿತರು. ಅವರು
ರುಪಾಯರಾಗಿ " ದಿವಾಕರನ ಸುದ್ದಿಯೇನಾದರು, ಅನ್ನು
ಷ್ಟರಲ್ಲಿ, ಮಧುಕರನು ಅಳಲಾರಂಭಿಸಿದನು. ವಿಮಲೆ
ತೂ ಆಶ್ಚರ್ಯವಾಯಿತು. ತನ್ನ ಮಾವನಿಗೆ ಬುದ್ಧಿ ಭ್ರಂಶ

ವಾಗಿರಬಹುದೆಂದಳು ಯಾಕಂದರೆ ಸುಮಾರು ಸತ್ತು ತಿಂಗ
ಳ ಮೇಲಾಗಿರಬಹುದು ಪುನಃ ಗೊತ್ತಿಲ್ಲದವರಂತೆ ಕೇಳುವ
ದನ್ನು ನೋಡಿ ಆಶ್ಚರ್ಯಪಟ್ಟಳು. ಆದರೆ ಅದು ಅವಳ
ತಪ್ಪಲ್ಲ. ನಮ್ಮ ಮಧುಕರನದು ಅವನಾದರೂ ಏನು ಮಾಡಿ
ಯಾನು? ಹಿಂದಕ್ಕೆ ಬಂದಾಗ್ಗೆ ಧೈರ್ಯವಿಲ್ಲದವನಾಗಿ, ಹೇ
ಳದೆ ಹೋದದ್ದು ನಮ್ಮ ವಾಚಕರಿಗೆ ಗೊತ್ತಿರಬಹುದು.

ಅವನು ಅಳಹತ್ತಿದ ಕೂಡಲೇ ತಾಯಿ ವರದಾಬಾಯಿ
ಯು ಯಾಕೆ, ಮಧು, ಹೇಳಬಾರದೇ ಏನಾಗಿದೆಂಬನ್ನು?,,

"ಅವ್ವಾ ಆತನು ಸಮುದ್ರದಲ್ಲಿ"——

ಮುಂದೆ ಮಾತೆ ಇಲ್ಲಾ. ತಂದೆತಾಯಗಳ ಕೇಳುವ ಇಚ್ಛೆಯು
ಹೆಚ್ಚಾಯಿತು. ಅಳಲಾರಂಭಿಸಿದರು. ಆನಂದರಾಯ
ರಂತೂ ಸುಮ್ಮನೆ ಹಣೆಯ ಮೇಲೆ ಕೈಯಿಟ್ಟುಕೊಂಡು
ಕುಳಿತುಬಿಟ್ಟರು.

"ಅವ್ವಾ ಆತನು ಸಮುದ್ರದಲ್ಲಿ ಬಿದ್ದು ಸತ್ತು ತಿಂಗ
ಳಾಯಿತು.,,

ವರದಾಬಾಯಿಯವರ ದುಃಖಕ್ಕೆ ಸೀಮೆ ಇಲ್ಲದಂತಾ
ಯಿತು. ಮುಪ್ಪಿನ ಕಾಲದಲ್ಲಿ ದುಃಖಗಳು ಹೆಚ್ಚಾಗ ಹತ್ತಿ
ದವು. ಈಗ ಪುನಃ ಮಗನೂ, ಮಗಳೂ, ಪ್ಲೇಗಿನಿಂ
ಬಳಲುತ್ತಲಿದ್ದಾರೆ. ಅತ್ತು ಅತ್ತು ಉಪಾಯಗಾಣದೆ, ಒಳಗ
ಹೋದರು. ಮರುದಿವಸ ಮುಂಜಾನೆ, ಒಬ್ಬ ಬೇಲಿಫನು
ಬಂದು ಬಾಗಿಲ ಬಳಿ ನಿಂತನು. ಮನೆಯಲ್ಲಿ ಮಧುಕರನಿರಲಿ

ಒಳಗೆ ಪ್ರವೇಶಮಾಡಿ ಒಂದು ಕಾಗದವನ್ನು ಆನಂದರಾಯು ರಕೈಯಲ್ಲಿಟ್ಟನು. ಅದನ್ನು ಓದಿ "ಆವರು ಯಾಕಾಗವಲ್ಲದು ಮಾಹಾರಾಯಾ ಹೊಲಲಿಲಾವು ಮಾಡಲಿಕ್ಕೆ ನನ್ನ ಸಮ್ಮತಿ ಕೊಟ್ಟದ್ದೇನೆ,. ಎಂದು ಹೇಳಿ ಕಾಗದಕ್ಕೆ ಸಹಿ ಮಾಡಿದರು.

ಆನಂದರಾಯರ ಹೊಲವೆಲ್ಲವೂ ಲಿಲಾವಿನಲ್ಲಿ ಮಾರಾಟವಾದವು. ಇವರ ಆಸ್ತಿಯಲ್ಲವೂ ಕೈಬಿಟ್ಟು ಹೋದವು. ಲಗ್ನಕ್ಕೆ ಒತ್ತಿಹಾಕಿದ್ದರಿಂದ ಅವರ ಹೊಲಗಳೆಲ್ಲವೂ ಹೋದವು. ಆನಂದರಾಯರ ಚಿಂತೆಯೆಂಬ ಸೋಪಾನಗಳು ದಿನದಿನಕ್ಕೆ ಎರಹತ್ತಿದವು. ಆವರು ಘಾಬರಿಯಾದರು. ಘಾಬರಿಯಾದರೆ ಪ್ರಯೋಜನವೇನು ? ಮುಂದಿನ ತೊಂದರೆಗಳಿಗೆ ಧೈರ್ಯವಂತರಾಗಬೇಕು. ಯಾಕಂದರೆ "ಧೈರ್ಯಂ ಸರ್ವತ್ರ ಸಾಧನಂ" ಎಂದು ಹೇಳಿದೆ ನೋಡಿರಿ! ಆವರ ಕಷ್ಟಗಳು ಮಗನೊಬ್ಬನು ಸತ್ತನು. ದಿನಕರನು ಜಡ್ಡಿನವನು, ಮಗಳು ಜಡ್ಡಿನವಳು, ಮಮ್ಮಕ್ಕಳೂ ಸಹ ಜ್ವರದಿಂದ ಪೀಡಿತರಾಗಿವೆ. ಹೊಟ್ಟೆಗೆ ಮುಂದೆ ಗತಿಯಿಲ್ಲಾ ಮಧುಕರನು ರಜೆ ತೆಗೆದುಕೊಂಡು ಬಂದಿದ್ದನು. ಹೀಗಾಗಿ ಇಷ್ಟು ತ್ರಾಸವಲ್ಲದೆ, ಹೊಲಗಳೆಲ್ಲವೂ ಕೈಬಿಟ್ಟು ಹೋದವು. ಮುಪ್ಪಿನವರು. "ದೊಡ್ಡ ಸಂಸಾರ" "ಹೇಗೆ ಸಂಸಾರ ಸಾಗಿಸಬೇಕು ?' "ಎಲ್ಲರಿಗೂ ಗುಣವಾಗುವದೇ ,, "ಏನು ಆಗುವದೋ ಆಗಲಿ, ಸಹಿಸಲಿಕ್ಕೆ ಧೈರ್ಯವನ್ನು ತಾಳಬೇಕಲ್ಲವೇ? ಧೈರ್ಯ ಹೀನನಾದರೆ, ನಾನು ಸಹ ಇವತ್ತೇ ಪರಲೋಕಕ್ಕೆ ತೆರಳು,

ವೆನು ನಾನು ತೆರಳಿದ ಮೇಲೆ, ಹೆಂಡತಿ ಮಕ್ಕಳು ಮೊಮ್ಮ
ಕ್ಕಳ ಸ್ಥಿತಿಗತಿಯೇನಾಗುವದು ? ಏನು ಮಾಡಲಿ ,, ಎಂಬೀ
ಮುಂತಾದ ವಿಚಾರದಲ್ಲಿ ಆನಂದರಾಯರು ತಟಸ್ಥರಾಗಿ
ಕುಳಿತಿದ್ದರು. ವರದಾಬಾಯಿಯವರ ದುಃಖವನ್ನು ಹೇಳ
ಲಸಾಧ್ಯ ವಿಮಲೆಯದಂತೂ ಲೇಖಕನ ಕಡೆಯಿಂದಾ ಬರೆ
ಯುವದು ದುಸ್ತರ. ಅವರವರ ಗ್ರಹಗಳು ನೆಟ್ಟಗಿರಲಿಲ್ಲ.
ಆದದ್ದಾಗಲಿ ಎಂದು ಆನಂದರಾಯರು " ನನ್ನ ದೈವಲೀ
ಲೆಯು ಹೀಗಿರಬಹುದು ,, ಎಂದು ದೇವರ ಮೇಲೆ ಭಾರಹಾ
ಕಿದ್ದರು.

ಇನ್ನು ಸೂರ್ಯೋದಯಕ್ಕೆ ಎರಡು ತಾಸುಗಳಿರ ಬಹು
ದು. ಕತ್ತಲೆಯು ತನ್ನ ಮನೆಯ ಹಾದಿಯನ್ನು ಸಾವಕಾ
ಶವಾಗಿ ಹೋಗುತ್ತಲಿದೆ. ಒಕ್ಕಲಿಗರು ತಮ್ಮ ತಮ್ಮ ಹೊಲ
ಗಳಿಗೆ ಹೋಗ ಹತ್ತಿದ್ದಾರೆ. ಇಂಥಾ ಸಮಯದಲ್ಲಿ ಎಲ್ಲಿಯೋ
ಅಳುವ ಧ್ವನಿಯು ಕೇಳಬರುತ್ತಲಿದೆ. ಅದೆಂಥ ಅಳುವು!
ಬರು ಬರುತ್ತ ದೀರ್ಘವಾಗುತ್ತ ನಡೆದಿದೆ, ಇದೇನು! ಹಾಡಿ
ಹಾಡಿ ಅಳುತ್ತಲಿರುವರು. ಬಹುತರವಾಗಿ ಯಾರಾದರೂ
ಸತ್ತಿರ ಬಹುದು. ಹೀಗೆ ವಿಚಾರಮಾಡುತ್ತ ಸಮೀಪದ
ಜನರು, ಹಾಸಿಗೆಯಿಂದೆದ್ದು, ಅಳುವವರ ಮಾರ್ಗವನ್ನು
ಗೊತ್ತು ಹಚ್ಚಿ, ಹೋಗಿ ನೋಡಲಾಗಿ, ಒಂದು ಜಾತ್ರೆಯೇ
ನೆರೆದಿತ್ತು. ಆ ಹಾದಿಕಾರರೂ ಬಂದು ನೆರೆದರು ಹೆಂಗ
ಳೆಯರು ಬಂದು ನೆರೆದರು. ಸಣ್ಣ ಬಾಲಕರು ಸಹ, ನಿದ್ರಾ

ಪೇವತಿಯನ್ನು ಜುಲುಮೆಯಿಂದ ದೂಡಿ, ನೋಡಲಿಕ್ಕೆ ಹೋಗಹತ್ತಿದರು. ಯಾರು ಬಂದರೇನು ಒಳಗಿನವರ ರೋದನವು ಹೆಚ್ಚಾಯಿತು. ರೋದನದ ಧ್ವನಿಯು ಹೆಂಗಸಿನದಾಗಿದ್ದಿತು. ನಡು ನಡುವೆ ಒಬ್ಬ ತರುಣನ ಅಳುವು ಕೇಳುತ್ತಿತ್ತು. ಮನೆಯ ಮುಂದೆ ಪರಸಿಯು ನೆರೆದದ್ದನ್ನು ನೋಡಿ ಮತ್ತಿಷ್ಟು ಅಳಲಾರಂಭಿಸಿದರು. ಎಷ್ಟು ಅತ್ತರೇನು ಸತ್ತವರು ಬದಕುವರೇ ? ಅಥವಾ ಅಳುವವರನ್ನು ತಮ್ಮ ಸಂಗಡ ಕರೆಕೊಂಡು ಹೋಗುವರೆ? ಯಾರು ಹೇಳಿದರೂ, ಕೇಳಿದರೂ ಸುಮ್ಮನಾಗಲೊಲ್ಲರು. ಮತ್ತಿಷ್ಟು ಅಧಿಕವೇ. ಇದನ್ನು ತಿಳಿಸಿದರೆ ನಮ್ಮ ವಾಚಕರಿಗೂ ದುಃಖವು ಬಿಡದು. ಮೊದಲೇ ಆತುರರಾಗಿರಬಹುದು. ಲೇಖಕನಿಗೆ ಧೈರ್ಯ ಸಾಲಲೊಲ್ಲದು. ಧೈರ್ಯಮಾಡಿ ಒಮ್ಮೆ ಹೇಳಿ ಬಿಡುವೆನು.

" ವಾಚಕರೇ ಹಿಂದುಗಡೆ ನನ್ನನ್ನು ನಿಂದಿಸ ಬೇಡಿರಿ ಆನಂದರಾಯರ ಮನೆಯಲ್ಲಿಯ ರೋದನವಿದು. ಆವರ[ದಿನಕರ)ಮಗನೂ, ಮಗಳೂ, ಮಮ್ಮಕ್ಕಳೂ ಒಮ್ಮೆಲೆ ಸಾವಿಗಿಡಾದರು. ಆನಂದರಾಯರಂತೂ ಮನೆಯಲ್ಲಿ ನಿಲ್ಲದೆ, ಹೊರಗೆ ಹೋದರು. ಅಷ್ಟರಲ್ಲಿ ಸೂರ್ಯೋದಯವಾಯಿತು. ಎಲ್ಲವೂ ಸಿದ್ಧವಾಯಿತು. ಹತ್ತು ಹದಿನಾರು ಬ್ರಾಹ್ಮಣರು ಬಂದು ಮುಂದಿನ ಕಾರ್ಯಕ್ಕೆ ಪ್ರಾರಂಭಿಸಿದರು. ವಿಮಲೆ ವರದಾಬಾಯಿಯವರು, ಮೂಲೆಯನ್ನು ಹಿಡಿದಿದ್ದರು. ವರದಾಬಾ

ಯಿಯವರು ಅತ್ತು ಅತ್ತು ಬೇಸತ್ತು ಅಲ್ಲಿಯೇ ಮಲಗಿದ್ದರು. ಉಳಿದವರಂತೂ ಕೆಲಸದಲ್ಲಿ ತೊಡಗಿದ್ದರು. ಈ ಸಮ್ಯ ಯವನ್ನು ಸಾಧಿಸಿ, ಮೆಲ್ಲ ಮೆಲ್ಲನೆ, ನಡೆಯಲಿಕ್ಕೆ ಬರದಿದ್ದರೂ, ಜುಲುಮೆಯಿಂದ ನಡೆಯುತ್ತ, ಹಿತ್ತಲ ಬಳಿಬಂದಳು. ಯಾರೂ ಇರಲಿಲ್ಲ. ಗಂಡನನ್ನು ನೆನಸಿ ಅಳಲಾರಂಭಿಸಿದಳು. ಅಳುವನ್ನು ನಿಲ್ಲಿಸಿ, ದೇವರನ್ನೂ, ತಂದೆತಾಯಿಗಳನ್ನು ನೆನೆದು, ಮುಂದೆ ಏನು ಕೆಲಸವಿರುವದೋ ಏನೋ ಎಂಬಂತೆ, ಅತಿ ಅವಸರದಿಂದ ಹೋದಳು. ಮುಂದೆ ಒಂದು ನಿಮಿಷದಲ್ಲಿ ನೀರಲ್ಲಿ ಯಾರೋ ಬಿದ್ದಂತೆ ಭಾಸವಾಯಿತು. ಅವಳು ನಿಜವಾಗಿ ವಿಮಲೆಯು. ಗಂಡನನ್ನು ಬಿಟ್ಟಿರಲಾರದೆ ಅವನ ಒಡನೆಯೇ ಹೋಗಬೇಕೆಂದು ನೀರಲ್ಲಿ ಧುಮುಕಿದಳು. ಅಬಲೆ, ಹ್ಯಾಗೆ ಗಂಡನ, ಮಕ್ಕಳ ದುಃಖವನ್ನು ಸಹಿಸುವದಾದಿತು? ಇತ್ತ ಕಡೆಗೆ, ಎಲ್ಲ ಪ್ರೇತಗಳ ವಿಧಿಗಳನ್ನು ತೀರಿಸಿ, ಎಲ್ಲರೂ ತಮ್ಮ ತಮ್ಮ ಮನೆಯ ದಾರೀ ಹಿಡಿದರು. ವರದಾಬಾಯಿಯವರಿಗೆ ಸ್ವಲ್ಪ ಎಚ್ಚರವಾದಂತಾಯಿತು. ಎದ್ದವರೇ ಆನಂದರಾಯರೆಲ್ಲಿರುವರೆಂದು ಹುಡುಕ ಹತ್ತಿದರು. ಹೊರಗೆ ಕಟ್ಟೆಯ ಮೇಲೆ ಮಧುಕರನ ಸಂಗಡ ಅಳುತ್ತ ಕುಳಿತಿದ್ದರು. ನಾಲ್ಕಾರು ತಾಸುಗಳು ಕಳೆದ ಮೇಲೆ ಮಧುಕರನೆದ್ದು “ ಅವ್ವಾ ಅತ್ತಿಗೆಯಲ್ಲಿ?” ಎಂದು ಕೇಳಿದನು.

ಎಲ್ಲರೂ ಘಾಬರಿಯಾದರು ಮನೆಯಲ್ಲಿ ಹುಡುಕಿದರು. ಸಮೀಪದ ಮನೆಗಳನ್ನು ಹುಡುಕಿದರು. ಎಲ್ಲಿಯೂ ಅವಳ

ಸುಳುವೇ ಇಲ್ಲಾ. ಆಳುಗಳನ್ನು ಊರಲ್ಲಿ ಹುಡುಕಲಿಕ್ಕೆ ಕಳಿಸಿದರು.

ಅಷ್ಟರಲ್ಲಿ "ವರದಾಬಾಯಿಯವರೆ, ಒಂದು ಹೆಣವು ಭಾವಿಯಲ್ಲಿ ತೇಲಹತ್ತಿದೆ ಅದು ವಿಮಲಕ್ಕನ ಹಾಗೆ ಕಾಣಿಸುತ್ತದೆ ನೋಡಿರಿ" ಎಂದು ಸಮೀಪದ ಮನೆಯವಳು ಬಂದು ಹೇಳಿದಳು.

"ಅಯ್ಯೋ !! ವಿಮಲೆ ನೀನು ಗಂಡನ ಸಂಗತಿಯಾಗಿ ನಮ್ಮನ್ನು ಬಿಟ್ಟು ಹೋದಿಯಾ, ಇನ್ನು ಮುಂದೆ ಏನು ಮಾಡಬೇಕು. ಅಯ್ಯೋ ! ನಮ್ಮ ಪಾಪಿ ದೈವವೆ" ಎಂದು ಭೋರಿಟ್ಟು ವರದಾಬಾಯಿಯವರು ಅಳಹತ್ತಿದರು. ಮಧುಕರನಿಗೆ; ದೊಡ್ಡವನಾದಾಗ್ಯೂ ತಿಳಿದವನಾದಾಗ್ಯೂ, ಕಲಿತಿದ್ದರೂ, ಇಡೀ ಮನೆಯು ಸಾಲಲಿಲ್ಲಾ, ಅಷ್ಟು ಅತ್ತನು. ಅತ್ತಿಗೆಯ ಮೇಲೆ ಅವನ ಮಮತೆ ಬಹಳ ಅವಳೆಂದರೆ ಸುಶೀಲೆಗಿಂತ ಹೆಚ್ಚು, ಅಣ್ಣನಗಿಂತಲೂ ಹೆಚ್ಚು. ಅವಳೇ ಅವನ ತಾಯಿಯಂತಿದ್ದಳು. ಆಕೆಯ ವಿಧಿಯು ಸಹ ಮುಗಿಯಿತು. ವರದಾಬಾಯಿಯವರು ಕುಳಿತಲ್ಲಿಯೇ ಕುಳಿತು ಬಿಟ್ಟರು. ಮಧುಕರನು ಮಲಗಿದವ ಏಳಲೇ ಇಲ್ಲ. ಯಾರು ಊಟ ಊಡಿಗೆ ಇಲ್ಲದೆ ಆ ದಿನವನ್ನು ಕಳೆದರು. ಏಳೆಂಟು ದಿನಗಳು ಕಳೆದವು. ಒಂಭತ್ತನೆಯ ದಿವಸ ಮುಂಜಾನೆ ಮುಂಬಯಿಯಿಂದ ಒಂದು ತಂತಿಯು ಬಂತು ಆದರಲ್ಲಿ

" ನಿನ್ನ ರಜೆಯು ಮುಗಿಯಿತು. ನಾಳೆ ಕೆಲಸಕ್ಕೆ ಹಾಜರ ಆಗದಿದ್ದರೆ ಕೆಲಸದಿಂದ ತೆಗೆಯುವೆವು." ಎಂದು ಇತ್ತು. ಅದನ್ನು ನೋಡಿದವನೇ ತಂದೆತಾಯಿಗಳಿಗೆ ಹೇಳಿ, ಹೊರಟು ಹೋದನು. ಮುಂದೆ ನಾಲ್ಕಾರು ದಿವಸಗಳ ಮೇಲೆ ಆನಂದರಾಯರ ಹೆಸರಿಗೆ ಮಧುಕರನು ೫೦ ರೂಪಾಯಿಗಳನ್ನು ಕಳಿಸಿದನು.

ಆರು ತಿಂಗಳು ಕಳೆದವು. ವರದಾಬಾಯಿಯವರಿಗೆ ಮಕ್ಕಳವಿಯೋಗದಿಂದ ಒಂದು ತರದ ರೋಗವು ಅಂಟಿಕೊಂಡಿತು. ಗುಣವೇ ಇಲ್ಲ, ಔಷದ ಉಪಚಾರವನ್ನು ಬಿಟ್ಟರು. " ಮಕ್ಕಳು ಸತ್ತು ಹೋದ ಮೇಲೆ ನಾನಿದ್ದು ಮಾಡುವದೇನು? " ಎಂದು ಮೇಲಿಂದ ಮೇಲೆ ಅನ್ನುತ್ತಿದ್ದರು. ಮತ್ತೆ ಆರು ತಿಂಗಳು ಕಳೆದವು. ಆದರೂ ಗುಣವಿಲ್ಲ. ದಿನ ದಿನ ಕೃಶವಾಗುತ್ತಾ ನಡೆದಿದ್ದರು. ಮೇಲಿಂದ ಮೇಲೆ ಮಕ್ಕಳ ನೆನಪು ತೆಗೆದು ದಿನಕ್ಕೆ ದಿನವೇ ಅಳುವದರಲ್ಲಿ ಕಾಲ ಕಳೆಯುತ್ತಿದ್ದರು. ಊಟವನ್ನು ಎಂದೋ ಬಿಟ್ಟಿದ್ದರು. ಪುನಃ ಆರು ತಿಂಗಳು ಆಗುವದೊರಳಗಾಗಿಯೇ ವರದಾಬಾಯಿಯವರು ಸ್ವರ್ಗಸ್ಥರಾದರು. ಆನಂದರಾಯರಿಗೆ ಹುಚ್ಚು ಹಿಡಿಯಿತು. ಮಧುಕರನಿಗೆ ಹೆಂಡತಿಯನ್ನು ಕರಕೊಂಡು ಬರಲಿಕ್ಕೆ ಯಾರೋ ಪುಣ್ಯಾತ್ಮರು ಪತ್ರ ಹಾಕಿದರು ಆನಂದರಾಯರು ಪ್ರತಿ ದಿವಸ ಅವನ ಹಾದೀ ನೋಡುತ್ತಿದ್ದರು. ಪತ್ರ ಹಾಕಿ ಎಂಟು ದಿನಗಳಾದರೂ ಬರಲೇ ಇಲ್ಲ. ಮದಿ

ನೈದು ದಿನಗಳು ಗತಿಸಿದವು, ತಿಂಗಳಾಯಿತು, ಎರಡು ತಿಂಗಳಾದವು ಆವನ ಸುದ್ದಿಯೇ ಇಲ್ಲ. ಆನಂದರಾಯರು ಘಾಬರಿಯಾದರು. ಅವರ ಬುದ್ಧಿಯು ಪ್ರತಿದಿವಸಕ್ಕೆ ಬಿಡಹತ್ತಿತು. ಅವರು ಊಟವನ್ನು ಬಿಟ್ಟರು. ನಿದ್ರೆಯಂತೂ ಎಂದಿಗೋ ಹೋಗಿತ್ತು ಯಾವಾಗಲೂ ಮಕ್ಕಳ ಚಿಂತೆ, ದುರ್ದೈವವನ್ನು ಹಳಿಯುತ್ತಿದ್ದರು. ಮುಂದೆ ಕೆಲವು ದಿವಸಗಳ ಮೇಲೆ, ಪ್ರಭಾಕರನು, ತನ್ನ ಮಾವನೂ, ಪರಮ ಮಿತ್ರನ ತಂದೆಯೂ, ಆದ ಆನಂದರಾಯರ ಭೆಟ್ಟಿಗೆ ಬಂದನು.

“ಪ್ರಭಾಕರ. ನನ್ನ ಮಧುಕರನೆಲ್ಲಿ ”

ಈ ಶಬ್ದಗಳನ್ನು ಕೇಳಿದ ಕೂಡಲೆ ಪ್ರಭಾಕರನ ಮೇಲೆ ಸಿಡಿಲು ಬಿದ್ದಂತಾಯಿತು. ಎಲ್ಲ ಕಡೆಗೂ ಕತ್ತಲೆ ಹಬ್ಬಿತು. ಅವನಿಗೆ ಬಾಯಿಯೇ ಇಲ್ಲದಂತಾಯಿತು. ನಡಗ ಹತ್ತಿದನು. ಮುಖವು ಕೆಂಪೇರಿತು. ಧೈರ್ಯವಂತೂ ಎಂದೋ ಹೋಯಿತು. ಆನಂದರಾಯರಿಗೆ ಗೊತ್ತಾಗಿರ ಬಹುದೆಂದು ಅವನು ತಿಳಿದಿದ್ದನು. ಪಾಪ ಅವರಿಗೆ ಗೊತ್ತೇ ಇಲ್ಲಾ. ಕಡೆಗೆ ನಿರುಪಾಯನಾಗಿ ನಿಟ್ಟುಸುರು ಬಿಡುತ್ತಾ “ಮಧುಕರ. ಮ ಹೆಂಡತಿ ಸ——ತ್ತರು.” ಎಂದು ಮೂರ್ಛೆ ಹೊಂದಿದನು. ಆನಂದರಾಯರಿಗೆ ವಜ್ರಘಾತವಾದಂತಾಯಿತು. ಆಕಾಶವೇ ಆವರ ಮೇಲೆ ಹರಿದು ಬಿದ್ದಿತು. ಅವರ ಶರೀರವು ಕಾತರಗೊಂಡಿತು. ಕಂಣುಗಳಲ್ಲಿ ಅಳಬೇಕೆಂದರೆ ನೀರೆ ಇಲ್ಲಾ. ಬತ್ತಿ ಹೋಗಿದ್ದವು. ವಾಚಕರೇ, ನೋಡಿರಿ, ನಮ್ಮ ಆನಂದರಾಯರ

ದುರ್ದೈವ ಮಕ್ಕಳು, ಮೊಮ್ಮಕ್ಕಳು ಹೆಂಡತಿ, ಸೊಸೆಯಂದಿರು ಎಲ್ಲರೂ ಮೃತರಾದರು. ಮುದುಕರಾದ ಆನಂದರಾಯರು ಮಾತ್ರ ಉಳಿದರು. ಇಂಥ ದುರ್ದೈವವು ಯಾರದಾದರು ಇರುವದೇ? ದೇವರೇ ಬೇಡಪ್ಪಾ ಇಂಥ ಸ್ಥಿತಿಯು ಎಂಥ ವೈರಿಗಾದರೂ ಬರಬಾರದು. ಪ್ರಭಾಕರನು ಆನಂದರಾಯರನ್ನು ಮುಂಬಯಿಗೆ ಕರೆದುಕೊಂಡುಹೋಗಬೇಕೆಂದು ಎಷ್ಟು ಕರೆದರೂ ಬರಲಿಲ್ಲ. ಒಂದು ದಿನ. ಮುಂಜಾವಿನಲ್ಲಿ ಎದ್ದು "ನನ್ನ "ದೈವಲೀಲೆಯೋ" ಹೀಗಿರುವದು, ನನ್ನ ದುರ್ದೈವಕ್ಕೆ ಯಾರು ತಾನೆ ಏನು ಮಾಡುವರು? ನಾನೇ ಹೊಣೆಗಾರ,, ನೆಂದು ಹೊರಗೆ ಹೋದವರು ತಿರುಗಿ ಬರಲೇ ಇಲ್ಲ. ಎಲ್ಲಿಯೋ ಹೋಗಿ ಬಿಟ್ಟರು. ವರ್ತಮಾನವೇ ಇಲ್ಲ. ಎಲ್ಲಿಯೋ ಮಾಯವಾಗಿಬಿಟ್ಟರು ಆನಂದರಾಯರು.

ಸಮಾಪ್ತ

Printed by G. N. Ginimava, at The New Printing Press. Dajibapet Hubli.
Published by V. G. Pappu at Native General Library HUBLI.